# <u>ದೈವ</u>

–ಅರವಿಂದ.ಕೆ

ಪ್ರಾಣಿಗಳಿಗೂ ಸಸ್ಯಗಳಿಗೂ ನಡುವಿನ ವ್ಯತ್ಯಾಸವೆಂದರೆ ಪ್ರಾಣಿಗಳಿಗೆ ಮೆದುಳಿದೆ, ಸಸ್ಯಗಳಿಗಿಲ್ಲ. ಅದರಿಂದಾಗಿ ಪ್ರಾಣಿಗಳಲ್ಲಿ ಯೋಚನಾಶಕ್ತಿಯಿದೆ. ಸಸ್ಯಗಳು ಯೋಚಿಸುವುದಿಲ್ಲ, ಅಥವಾ ಹಾಗೆಂದು ಪ್ರಾಣಿಗಳಾದ ನಾವು ಅಂದುಕೊಂಡಿದ್ದೇವೆ. ಪ್ರಾಣಿಗಳು ಎಷ್ಟರ ಮಟ್ಟಿಗೆ ಯೋಚಿಸುತ್ತವೆ? ಒಂದು ಇರುವೆ ತನ್ನ ಆಹಾರದ ಸಂಗ್ರಹಣೆಯ ಬಗ್ಗೆ ಯೋಚಿಸುತ್ತದೆ. ಒಂದು ಹುಲಿ ತನ್ನ ಆಹಾರದ ಬೇಟೆಯ ಬಗ್ಗೆ ಯೋಚಿಸುತ್ತದೆ. ಹಾಗೆಯೇ ಒಂದು ನಾಯಿ ತನಗೆ ಕೇಳಿಸುವ ಶಬ್ದಗಳ ಬಗ್ಗೆ ಯೋಚಿಸುತ್ತದೆ ಮತ್ತು ಒಂದು ಬೆಕ್ಕು ತಾನು ನೋಡುವ ನೋಟಗಳ ಬಗ್ಗೆ ಯೋಚಿಸುತ್ತದೆ. ಈ ರೀತಿ ಒಂದೊಂದು ಪ್ರಾಣಿಯ ಯೋಚನಾಮಟ್ಟ ಒಂದೊಂದು ತರಹ. ಈ ಎಲ್ಲಾ ಪ್ರಾಣಿಗಳಿಗಿಂತಲೂ ಮನುಷ್ಯ ಪ್ರಾಣಿಯ ಯೋಚನಾಮಟ್ಟವು ಮೇಲ್ಮಟ್ಟದ್ದು.

ಮನುಷ್ಯರು ಬೇರೆಲ್ಲಾ ಪ್ರಾಣಿಗಳಿಗಿಂತಲೂ ಹೆಚ್ಚು ಯೋಚಿಸಬಲ್ಲರು. ಆದರೆ ಅವರ ಯೋಚನಾಮಟ್ಟವು ಕೂಡ ನಿಸರ್ಗದಿಂದ ನಿಯಮಿತವಾಗಿದೆ. ತನ್ನ ಮಟ್ಟವನ್ನು ಮೀರಿ ಮನುಷ್ಯಪ್ರಾಣಿ ಕೂಡ ಅನಿಯಮಿತವಾಗಿ ಯೋಚಿಸಲಾರದು. ಹೇಗೆ ದೇಹಶಕ್ತಿಗೆ ಒಂದು ಮಿತಿಯಿದೆಯೋ ಆದೇ ತರಹ ಮನಶ್ಶಕ್ತಿಗೂ ಕೂಡ ಒಂದು ಮಿತಿಯಿರುವುದರಿಂದ, ನಮಗೆ ಮೀರಿದುದನ್ನು ಅರಿಯಲು ನಮ್ಮಿಂದ ಸಾಧ್ಯವಾಗಿಲ್ಲ. ನಮ್ಮ ಮನಶ್ಶಕ್ತಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವುದೂ ಸಹ ನಮ್ಮಲ್ಲಿ ಬಹಳಷ್ಟು ಜನರಿಗೆ ಸಾಧ್ಯವಾಗಿಲ್ಲ. ನಮ್ಮ ತಿಳಿವಿಗೆ ಮೀರಿದ ಶಕ್ತಿಯ ಅರಿವು ನಮಗಿನ್ನೂ ಆಗಿಲ್ಲ. ಹಾಗೆಂದ ಮಾತ್ರಕ್ಕೆ ನಮಗೆ ಮೀರಿದುದು ಇಲ್ಲವೆಂದು ಹೇಳಬಹುದೇ?

**<u>ದೈವಶಕ್ತಿಯು ಇದೆಯೇ?</u>** : ಆಸ್ತಿಕರಿಗೂ ನಾಸ್ತಿಕರಿಗೂ ನಡುವಿನ ಅಂತರ **"ನ"** ಎಂಬ ಅಕ್ಷರ. ಆಸ್ತಿಕರು ದೈವತ್ವವು ಇದೆಯೆಂದರೆ ನಾಸ್ತಿಕರು ಇಲ್ಲವೆನ್ನುತ್ತಾರೆ. ಆದರೆ ಇದೆ ಅಥವಾ ಎಲ್ಲ ಎಂಬ ಎರಡು ಉತ್ತರಗಳನ್ನು ಹೇಳಲು ಕೂಡ ಆ ಅಸ್ತಿತ್ವದ ಸಾಕ್ಷಿ ಬೇಕು. ಆ ಸಾಕ್ಷಿಗೆ ಪೂರಕವೇ ಈ ಲೇಖನ.

ಕೋಪರ್ನಿಕಸನು ಸೂರ್ಯನ ಸುತ್ತ ಭೂಮಿ ತಿರುಗುವ ಸಿದ್ಧಾಂತವನ್ನು ಮಂಡಿಸುವ ತನಕವೂ ಆತನ ದೇಶದ ಜನರು ಸೂರ್ಯನೇ ಭೂಮಿಯ ಸುತ್ತ ತಿರುಗುವನೆಂದು ತಿಳಿದಿದ್ದರು. ಕೋಪರ್ನಿಕಸನ ಈ ಸಿದ್ಧಾಂತವು ಆತನ ಜೀವಕ್ಕೆ ಮಾರಕವಾಗಿತ್ತು ಕೂಡ. ಆದರೆ ಆತನ ಅಂದಿನ ಸಿದ್ಧಾಂತವು ಇಂದಿನ ವಿಜ್ಞಾನಕ್ಕೆ ನಿತ್ಯ ಸತ್ಯ.

ಮನುಷ್ಯನಿಗೆ ಭೌತಿಕದೇಹದ ಹೊರತು ಬೇರೇನೂ ಇಲ್ಲವೆಂದರು ನೂತನ ವಿಜ್ಞಾನಿಗಳು. ಈ ದೇಹಕ್ಕೆ ಔಷಧಿಯನ್ನು ಕೊಟ್ಟು ಮಾತ್ರ ಖಾಯಿಲೆಗಳನ್ನು ಗುಣಪಡಿಸಬಹುದು ಎಂಬುದು ಒಂದು ನಂಬಿಕೆಯಾಗಿದೆ ಕೂಡ. ಔಷಧಿಯಿಲ್ಲದೆಯೇ ಖಾಯಿಲೆಯನ್ನು ಗುಣಪಡಿಸಲು ಸಾಧ್ಯ ಎಂದರೆ ಬಹಳ ಜನರಿಗೆ ಆಶ್ಚರ್ಯವಾದೀತು. ಆದರೆ ಮನುಷ್ಯನ ದೇಹದ ಸುತ್ತಲೂ ಪ್ರಭಾವಲಯವೊಂದಿದೆ ಎಂಬುದು ಈಗ ವೈಜ್ಞಾನಿಕವಾಗಿಯೇ ಸಿದ್ಧವಾಗಿದೆ. ಆ ಪ್ರಭಾವಲಯವನ್ನು ನೋಡಲು ಹಾಗೂ ಸ್ಪರ್ಶಿಸಲು ಸಾಧ್ಯ; ಕಿರ್ಲಿಯನ್ ಫೋಟೋಗ್ರಫಿಯ ಮೂಲಕ ಅದರ ಛಾಯಾಚಿತ್ರವನ್ನು ಕೂಡ ತೆಗೆಯಬಹುದಾಗಿದೆ.

**<u>"ಆತ್ಮವನ್ನು ಯಾರು ನೋಡಿದ್ದಾರೆ? ಆತ್ಮ, ಗೀತ್ಮ ಏನೂ ಇಲ್ಲ"</u>** ಎಂಬುದು ಕೆಲವರ ಹೇಳಿಕೆ. ಆತ್ಮವನ್ನು ನೋಡಲು ಅದೇನೂ ದೂರದರ್ಶನದಲ್ಲಿ ಪ್ರಸಾರವಾಗುವ ಚಿತ್ರವಲ್ಲ. ನೋಡಬೇಕೆಂದರೆ ಮೊದಲು ಆತ್ಮವಿರುವ ಬಗ್ಗೆ ನಂಬಿಕೆ ಬೇಕಲ್ಲ! ಆನಂತರ ಅದೇ ತರಹದ ಸಾಧನೆ ಕೂಡ ಅಗತ್ಯ.

ಈ ಎಲ್ಲ **"ಇಲ್ಲ"** ಗಳ ಪಟ್ಟಿಯಲ್ಲಿ ದೈವತ್ವವನ್ನು ಕೂಡ ಸೇರಿಸಿದರು ನಮ್ಮ ಬುದ್ಧಿವಾದಿಗಳು. ಆಧುನಿಕ ಯೋಚನಾಲಹರಿಯ ನೆಪದಲ್ಲಿ ನಾವು ಎಷ್ಟರ ಮಟ್ಟಿಗೆ ಪಾಶ್ಚಾತ್ಯರನ್ನು ಅನುಕರಿಸಿದೆವೆಂದರೆ, ನಮ್ಮ ಸನಾತನವನ್ನು ಮರೆತು ಪಾಶ್ಚಾತ್ಯರ ಯೋಚನಾಲಹರಿಯನ್ನು ಮೈಗೂಡಿಸಿಕೊಳ್ಳುವ ದುರ್ವಿಧಿ ನಮ್ಮದಾಯಿತು. ಆದರಿಂದ ಈಗ ಆಗಿರುವುದೇನು? ನಾವು ಪಾಶ್ಚಾತ್ಯರಲ್ಲಿನ ನಾಸ್ತಿಕತೆಯ ಮದ್ಯ ಕುಡಿದರೆ ಅವರು ನಮ್ಮಲ್ಲಿನ ಸನಾತನದ ಮಕರಂದವನ್ನು ಸವಿಯತೊಡಗಿದ್ದಾರೆ. ಅಷ್ಟು ಸಾಲದೆಂದು ನಮ್ಮ ಸನಾತನವನ್ನು ನಮಗೇ ತಿಳಿಯ ಹೇಳುತ್ತಿದ್ದಾರೆ.

**ನಮ್ಮ ಯೋಚನಾಲಹರಿ ಎಷ್ಟರ ಮಟ್ಟಿಗೆ ಆಧುನಿಕ?** ಪಾಶ್ಚಾತ್ಯರು ಛಳಿಯನ್ನು ತಡೆದುಕೊಳ್ಳಲು ಶೂ, ಟೈಗಳನ್ನು ಧರಿಸಿದರೆ ನಾವು ಉರಿಬಿಸಿಲಿನ ಬೆವರಿನಲ್ಲಿ ಕೂಡ ಅವರನ್ನು ಅನುಕರಿಸಿ, ಶೂ, ಟೈಗಳನ್ನು ಧರಿಸಿಕೊಂಡು ಓಡಾಡುತ್ತೇವೆ. ಇಂದಿನ ಆಧುನಿಕತೆಯಲ್ಲಿ ನಮ್ಮ ಭೌತಿಕ ಮಟ್ಟವನ್ನು ತೋರಿಸಲು ಅದು ಅನಿವಾರ್ಯ ಕೂಡಾ ಆಗಿದೆ. ಪಾಶ್ಚಾತ್ಯರು ಛಳಿಯಲ್ಲಿ ಜೀವಿಸಲು ಮಾಂಸಾಹಾರ, ಮದ್ಯಪಾನಗಳನ್ನು ಮಾಡಿದರೆ ನಮಗೀಗ ಅದು ದೈನಂದಿನ ಚಟುವಟಿಕೆಯಾಗಿದೆ. ಯಾವ ಕಾರ್ಖಾನೆ ಮುಚ್ಚಿದರೂ ಕೂಡ ಮದ್ಯ ತಯಾರಿಕೆಯ ಹಾಗೂ ಧೂಮ್ರಪಾನ ವಸ್ತುಗಳ ತಯಾರಿಕೆಯ ಕಾರ್ಖಾನೆಗಳು ಮುಚ್ಚುವುದಿಲ್ಲ. ಈ ವಿಷಯಗಳಲ್ಲಿ ಪಾಶ್ಚಾತ್ಯರನ್ನು ಅನುಕರಿಸಿದ ನಾವು ಇತರ ವಿಷಯಗಳಲ್ಲಿ ಹಾಗೆ ಮಾಡಲಿಲ್ಲ. ಪಾಶ್ಚಾತ್ಯರ ಒಳ್ಳೆಯ ಗುಣಗಳಾದ ಶಿಸ್ತು, ಸಮಯಬದ್ಧತೆ, ವಿನಯಗಳನ್ನು ನಾವು ಮೈಗೂಡಿಸಿಕೊಳ್ಳಲಿಲ್ಲ. ನಮ್ಮ ಸುತ್ತಲಿನ ನಿಸರ್ಗನಿಯಮಗಳನ್ನು ಹಾಗೂ ಸನಾತನ ಸಂಸ್ಕೃತಿಯನ್ನು ನಿರ್ಲಕ್ಷಿಸಿದ್ದರಿಂದಾಗಿ ನಮ್ಮ ಸುತ್ತಲೂ ದ್ವಂದ್ವ ಹಾಗೂ ಗೊಂದಲಮಯ ವಾತಾವರಣವನ್ನು ಸೃಷ್ಟಿಸಿಕೊಂಡಿದ್ದೇವೆ.

ಇಂದ್ರಿಯಗಳಿಗೆ ಅರಿವಾಗುವಂಥದು ಮಾತ್ರ **"ಇದೆ",** ಇಂದ್ರಿಯಕ್ಕೆ ಅತೀತವಾದುದು **"ಇಲ್ಲ"** ಎಂಬ **"ಮೂಢನಂಬಿಕೆ"**ಯೇ ನಮ್ಮ ಆಧುನಿಕ ವಿಚಾರ. ನಮ್ಮ ಪೂರ್ವಜರ ನಂಬಿಕೆಗಳನ್ನು ಮೂಢ ಎಂದು ಅಲ್ಲಗಳೆಯುವುದು ಆಧುನಿಕವಾದಿಗಳ ಮೂಢನಂಬಿಕೆ. ಆದರೆ, ಈ ಮೊದಲೇ ತಿಳಿಸಿದಂತೆ, ದೈವೀಶಕ್ತಿಯು ಇಂದ್ರಿಯಾತೀತ, ಮಾತ್ರವಲ್ಲ – ಅದು ಲಿಂಗಾತೀತ, ಕಾಲಾತೀತ ಹಾಗೂ ಜಾತ್ಯಾತೀತ! ಮುಂದೆ ಓದುತ್ತಾ ಹೋದಂತೆ ಈ ವಿಚಾರಗಳು ನಿಮಗೆ ಅರಿವಾಗುತ್ತವೆ.

ನಮ್ಮೀ ಪೃಥ್ವಿಯಲ್ಲಿ ಅನೇಕ ಮಹಾತ್ಮರುಗಳು ತಮ್ಮ ತಮ್ಮ ಅನುಭವಗಳಿಂದ ದೈವೀಶಕ್ತಿಯನ್ನು ಕಂಡರು ಹಾಗೂ ತಮ್ಮ ತಮ್ಮ ನಂಬಿಕೆಗಳಿಗೆ ತಕ್ಕಂತೆ ದೈವದ ತತ್ತ್ವವನ್ನು ಪ್ರತಿಪಾದಿಸಿದರು. ಆದರೆ ವಿಪರ್ಯಾಸವೆಂದರೆ ಜನರು ದೈವವನ್ನು ನಂಬುವ ಬದಲು ಈ ಮಹಾತ್ಮರುಗಳನ್ನೇ ನಂಬಿದರು ಹಾಗೂ ಅವರನ್ನೇ ದೈವದ ಮಟ್ಟಕ್ಕೇರಿಸಿದರು. ಬುದ್ಧ, ಯೇಸುಕ್ರಿಸ್ತ, ಬಸವಣ್ಣ, ಬಾಹುಬಲಿ – ಇವರೆಲ್ಲರೂ ಮನುಷ್ಯರಾಗಿಯೇ ಹುಟ್ಟಿ ದೈವತ್ವವನ್ನು ಅನುಭವಿಸಿದರು. ಅವರೆಲ್ಲರೂ ದೈವಶಕ್ತಿಯನ್ನು ನಂಬಲು ಹೇಳಿದರೇ ಹರತು 'ತಮ್ಮನ್ನು ಆರಾಧಿಸಿ' ಎಂದು ಹೇಳಲಿಲ್ಲ. ಆದರೆ ವಿಪರ್ಯಾಸವೆಂದರೆ ಅವರ ಅನುಯಾಯಿಗಳದೇ ಜಾತಿ, ಮತ, ಪಂಗಡಗಳು ಹುಟ್ಟಿಕೊಂಡವು ಹಾಗೂ ಧರ್ಮಗಳ ಹೆಸರಿನಲ್ಲಿ ಪ್ರಪಂಚದಾದ್ಯಂತ ಗೋಡೆಗಳು ಬೆಳೆದವು. ದೈವಶಕ್ತಿಗೆ ಸ್ಪಂದನ ಎಂಬುದಿದ್ದರೆ, ಅದು ಈಗ ನಗುತ್ತಿರಬೇಕು– ಈ ಮನುಷ್ಯರಿಗೆ ತಮ್ಮನ್ನು ತಾವು ಅರಿತುಕೊಳ್ಳಲು ಸಾಧ್ಯವಾಗಿಲ್ಲ, ಇನ್ನು ನನ್ನನ್ನೇನು ಅರಿತಾರು! ಎಂದು.

ತನ್ನನ್ನು ತಾನು ಅರಿತವನು ಪರರನ್ನು ಅರಿತಾನು. ಪರರನ್ನು ಅರಿತವನು ಪ್ರಪಂಚವನ್ನು ಅರಿತಾನು. ಪ್ರಪಂಚವನ್ನು ಅರಿತವನು ದೈವವನ್ನು ಅರಿತಾನು. ತನ್ನನ್ನು ತಾನು ಅರಿತುಕೊಳ್ಳಬೇಕೆಂದರೆ ಮನಸ್ಸಾಕ್ಷಿಯ ಮೂಲಕ ಅಂತಃಚಕ್ಷುವನ್ನು ತೆರೆದುಕೊಳ್ಳಬೇಕು.

ಕೆಲವರು ಹೇಳುವುದಿದೆ– ಪ್ರಪಂಚದಲ್ಲಿ ಇಷ್ಟೊಂದು ಕಷ್ಟವಿದೆ, ಕಲಹವಿದೆ. ದೇವರು ಇದ್ದಿದ್ದರೆ ಸುಮ್ಮನಿರುತ್ತಿದ್ದರೇ? ಈ ಕಷ್ಟಗಳನ್ನು ಪರಿಹರಿಸಲು, ದುಷ್ಟರನ್ನು ಸಂಹರಿಸಲು ಬರುತ್ತಿರಲಿಲ್ಲವೇ? ಎಂದು. ಈ ಕಷ್ಟ, ಕಲಹಗಳು ಮನುಷ್ಯರು ತಾವಾಗಿ ಸೃಷ್ಟಿಸಿಕೊಂಡಿದ್ದಲ್ಲವೇ? ತಾವಾಗಿ ಸಮಸ್ಯೆಗಳನ್ನು ಸೃಷ್ಟಿಸಿಕೊಂಡು ನಂತರ ಅದಕ್ಕೆ ದೈವವನ್ನು ಹೊಣೆ ಮಾಡುವುದು ಎಷ್ಟರ ಮಟ್ಟಿಗೆ ಸಮಂಜಸ? ನಮ್ಮ ಮನೆಯಲ್ಲಿ ಕೊಳೆ ತುಂಬಿಕೊಂಡು ಅದಕ್ಕೆ ಸರಕಾರವನ್ನು ದೂಷಿಸಿದಂತೆ. ನಮ್ಮ ಮನೆಯೊಳಗಿನ ಕೊಳೆ ತೊಳೆಯುವುದು ನಮ್ಮ ಕೆಲಸವೇ ಹೊರತು ಸರಕಾರದ್ದಲ್ಲ. ಅದೇ ತರಹ ಮನುಷ್ಯರು ತಮ್ಮ ಸ್ವಾರ್ಥ, ಅಹಂಕಾರಗಳಿಂದ ನೈಸರ್ಗಿಕ ಹಾಗೂ ದೈವೀನಿಯಮಗಳನ್ನು ಉಲ್ಲಂಘಿಸಿ ಪ್ರಪಂಚದಲ್ಲಿ ಕೊಳೆ ತುಂಬಿದ್ದಾರೆ. ಈ ಕೊಳೆಯನ್ನು ಮನುಷ್ಯರು ತಾವಾಗಿಯೇ ತೊಳೆಯಬೇಕು, ಇಲ್ಲದಿದ್ದರೆ ಈ ಕೊಳೆಯಲ್ಲಿಯೇ ಬೆಳೆಯಬೇಕು.

**<u>ದೈವನಿಯಮವೇನು? :</u>** ಡಾರ್ವಿನ್ನನ ವಿಕಾಸವಾದವು ಹೇಳುತ್ತದೆ– ಮಂಗನಿಂದ ಮಾನವ ಎಂದು. ಇದು ನಿಜವಿರಬಹುದು. ಮಾನವ ಒಮ್ಮೆಲೇ ಇಲ್ಲಿ ಜನ್ಮಿಸಲಿಲ್ಲ, ಮಂಗನಿಂದಲೇ ವಿಕಸಿಸರಬಹುದು. ಆದರೆ ಮಂಗ ಎಲ್ಲಿಂದ ಬಂತು? ಅದಕ್ಕೊಂದು ಮೂಲವಿರಬೇಕಲ್ಲ!

ಒಂದು ಜಾಡಿಯಲ್ಲಿ ಅಕ್ಕಿ ಹಾಕಿಟ್ಟರೆ ಸ್ವಲ್ಪ ದಿನಗಳ ನಂತರ ಅದರಲ್ಲಿ ಹಾತೆಗಳು ಹೇಗೆ ಹುಟ್ಟುತ್ತವೆ? ರವೆ ಹಾಕಿಟ್ಟರೆ ಅದರಲ್ಲಿ ಹುಳುಗಳು ಹೇಗೆ ಹುಟ್ಟುತ್ತವೆ? ಅದೇ ರವೆಯನ್ನು ಹುರಿದಿಟ್ಟರೆ ಅದರಲ್ಲಿ ಹುಳುಗಳು ಏಕೆ ಹುಟ್ಟುವುದಿಲ್ಲ? ಪುಸ್ತಕದ ಅರೆಗಳಲ್ಲಿ ಬೆಳ್ಳಿಮೀನೆಂಬ ಕೀಟ ಏಕೆ ಹುಟ್ಟುತ್ತದೆ? ಅವರೆಕಾಯಿಯಲ್ಲಿ ಹಸಿರು ಹುಳುಗಳೇ ಏಕೆ ಹುಟ್ಟುತ್ತವೆ? ಹುಳುವಾಗಿರುವಾಗ ತಿಂಗಳೆಲ್ಲಾ ಕೋಶದೊಳಗಿದ್ದ ಜೀವಿಯು ಚಿಟ್ಟೆಯಾದ ಮೇಲೆ ಒಂದೇ ವಾರ ಬದುಕುವುದೇಕೆ? ಎಲ್ಲ ಜೀವಿಗಳಿಗಿಂತಲೂ ಹೆಚ್ಚು ಬುದ್ಧಿಯಿರುವ ಮನುಷ್ಯ ಪ್ರಾಣಿಯ ಆಯುಷ್ಯವು ಆಮೆಗಿಂತ ಕಮ್ಮಿಯೇಕೆ?

ಮೇಲಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಧ್ಯದ ನಮ್ಮ ಬುದ್ಧಿಗೆ ಅತೀತ. ಆದರೆ ಉತ್ತರ ಕಂಡುಕೊಳ್ಳುವ ಮಾರ್ಗಗಳಂತೂ ಇವೆ. ಹೇಗೆ ನಮ್ಮ ಮಕ್ಕಳು ಸೃಷ್ಟಿಹೊಂದಿದ ನಂತರ ನಾವು ಅವರಿಗೆ ನಿಯಮಗಳನ್ನು ರೂಪಿಸುತ್ತೇವೋ ಅದೇ ತರಹ ದೈವವು ಕೂಡ ತನ್ನ ಸೃಷ್ಟಿಗೆ ನಿಯಮಗಳನ್ನು ರೂಪಿಸಿದೆ. ಅದರಂತೆಯೇ ನಾವು ಕೂಡ ಬದುಕಿದ್ದರೆ ಪ್ರಪಂಚವು ಕಲುಷಿತವಾಗುತ್ತಿರಲಿಲ್ಲ. ಆದರೆ ಮಾನವನು ತನ್ನ ಸೃಷ್ಟಿಗೆ ತಾನೇ ಕರ್ತೃ ಎಂಬ ಅಹಂಕಾರದಿಂದ ಪ್ರಕೃತಿ ನಿಯಮಗಳನ್ನು ಮೀರಿದ್ದಾನೆ ಹಾಗೂ ಅದರ ಫಲವನ್ನು ಅನುಭವಿಸುತ್ತಿದ್ದಾನೆ ಕೂಡ.

ಈಗ ಸ್ವಲ್ಪ ಮಟ್ಟಿಗೆ ದೈವದ ನಿಯಮಗಳನ್ನು ತಿಳಿಯಲು ಪ್ರಯತ್ನಿಸೋಣ. ಬೀಜದಿಂದ ಸಸಿಯು ಹುಟ್ಟಬೇಕು. ಆ ಸಸಿಯೊಳಗೆ ಹುಳುವು ಹುಟ್ಟಿ ಆ ಸಸಿಯನ್ನೇ ಮೇಯಬೇಕು. ನಂತರ ಆ ಹುಳುವು ಚಿಟ್ಟೆಯಾಗಿ ಸಸ್ಯಗಳ ನಡುವಿನ ಪರಾಗಸ್ಪರ್ಶದಿಂದ ಸಸ್ಯಗಳ ಸಂತತಿ ಬೆಳೆಯುವಲ್ಲಿ ತನ್ನ ಪಾತ್ರವನ್ನು ನಿರ್ವಹಿಸಬೇಕು. ಒಂದು ವೇಳೆ ಹುಳುವಾಗಿಯೇ ಉಳಿದರೆ ಹಕ್ಕಿಗೆ ಆಹಾರವಾಗಬೇಕು. ಸಸ್ಯಾಹಾರಿ ಪ್ರಾಣಿಗಳು ಸಸ್ಯಗಳನ್ನು ಮೇಯ್ದರೆ ಮಾಂಸಾಹಾರಿ ಪ್ರಾಣಿಗಳು ಈ ಸಸ್ಯಾಹಾರಿಗಳನ್ನು ಕೆಡವಿ ತಿನ್ನಬೇಕು. ಈ ಆಹಾರ ಸರಪಣಿಯ ಆಟದ ನಡುವೆ ಸಸ್ಯ ಹಾಗೂ ಪ್ರಾಣಿಗಳ ಸಂತತಿಯ ಅಭಿವೃದ್ಧಿಗಳೂ ನಡೆಯಬೇಕು. ಯಾವುದೇ ಜೀವವರ್ಗವೂ ಇನ್ನೊಂದು ವರ್ಗವನ್ನು ಮೀರುವಂತಾಗಬಾರದು; ಆದರೂ ಎಲ್ಲ ಜೀವವರ್ಗಗಳು ತಮ್ಮ ಸಂತತಿಯನ್ನು ಮುಂದುವರಿಸುವ ಕಾರ್ಯ ನಡೆಸುತ್ತಿರಬೇಕು. ಈ ಎಲ್ಲ ಕಾರ್ಯಗಳಿಗೂ ಅನುಕೂಲ ವಾತಾವರಣವನ್ನು ದೈವವೇ ರಚಿಸಿ ಕೊಟ್ಟಿದೆ. <u>ಈ ಗೊಂದಲಗಳ ಚಕ್ರದಲ್ಲಿ ಜೀವವು ಸುತ್ತುತ್ತಿರುವುದೇ ದೈವನಿಯಮ.</u> ಇದು ಏಕೆ ಹೀಗೆ ಎಂಬುದಕ್ಕೆ ನಮ್ಮಲ್ಲಿ ಉತ್ತರವಿಲ್ಲ; ಯಾಕೆಂದರೆ ನಾವು ಕೂಡಾ ಇಲ್ಲಿ ಪಾತ್ರಧಾರಿಗಳು ಮಾತ್ರ – ನಿರ್ದೇಶಕ ಶಕ್ತಿಯ ಬಗ್ಗೆ ನಮಗೆ ಸಂಪೂರ್ಣ ಅರಿವಿಲ್ಲ. ದೈವಲೀಲೆಯೆಂದು ಮಾತ್ರ ನಾವು ಹೇಳಬಲ್ಲೆವು.

ಈ ಸೃಷ್ಟಿಯ ನಿಯಮದಲ್ಲಿ ಯಾವುದೇ ಜೀವವರ್ಗವೂ ತಾನೇ ಎಲ್ಲಕ್ಕಿಂತ ಮೇಲೆಂದು ಮೆರೆಯುವಂತಿಲ್ಲ. ಹಾಗೆ ನಿಯಮವನ್ನು ಉಲ್ಲಂಘಿಸಿ ಮೆರೆದರೆ ಆ ಜೀವವರ್ಗವು ಉಳಿಯುವಂತಿಲ್ಲ. ಉದಾಹರಣೆಗೆ, ಲಕ್ಷಾಂತರ ವರ್ಷಗಳ ಹಿಂದೆ ಎಲ್ಲಕ್ಕಿಂತ ಬಲಾಢ್ಯವಾಗಿ ಬೆಳೆದ ಡೈನೋಸಾರ್‌ಗಳು ಇಂದು ಇಲ್ಲಿಲ್ಲ. ಅದೇ ತರಹ ಎಲ್ಲಕ್ಕಿಂತ ಬಲಾಢ್ಯವಾಗಿ ಬೆಳೆಯುವ ಮನುಷ್ಯವರ್ಗವೂ ಕೂಡ ಇಲ್ಲಿ ಉಳಿಯುವುದಿಲ್ಲ. ದೈವನಿಯಮಗಳನ್ನು ಉಲ್ಲಂಘಿಸಿ ನಡೆದಾಗ ಪ್ರಳಯವು ಸಂಭವಿಸುತ್ತದೆ. ಈ ಪ್ರಳಯವು ಒಂದು ದಿನದಲ್ಲಿ ನಡೆಯುವ ಕಾರ್ಯವಲ್ಲ. ಎಲ್ಲಿ ನಿಯಮಗಳ ಉಲ್ಲಂಘನೆಯಾಗುತ್ತದೋ ಅಲ್ಲಿ ಪ್ರಕೃತಿಯು ಆ ನಿಯಮಗಳನ್ನು ಸರಿಪಡಿಸಿಕೊಳ್ಳುವ ಕಾರ್ಯವೇ "ಪ್ರಳಯ". ಇದು ನಮಗೆ ಆತಂಕಕಾರಿಯಾದುದರಿಂದ ನಾವು ಭಯಭೀತರಾಗಿ ಇದನ್ನು ಪ್ರಳಯ ಎಂದು ಕರೆದೆವು. ಆದರೆ ಪ್ರಕೃತಿಗೆ ಇದು ಭಯಭೀತವಾದ ಕೆಲಸವಲ್ಲ; ಅದು ಪ್ರಕೃತಿಯ ನೈಸರ್ಗಿಕ ನಿಯಮ. ಮನುಷ್ಯನ ಸ್ವಾರ್ಥ, ಅಹಂಕಾರಗಳಿಂದ ಈ ನಿಯಮಗಳ ಉಲ್ಲಂಘನೆಯಾದಷ್ಟೂ ಪ್ರಳಯದ "ಆರ್ಭಟ"ವೂ ಜಾಸ್ತಿಯಾಗಬಹುದು; ಹಾಗೂ ಒಂದು ದಿನ ಪ್ರಕೃತಿಯು ಮನುಷ್ಯ ಎಂಬ ವರ್ಗವನ್ನೇ ಇಲ್ಲವಾಗಿಸಬಹುದು.

ಒಳ್ಳೆಯದು, ಕೆಟ್ಟದು ಎಂಬುದು ಕೂಡ ಮನುಷ್ಯ ಸೃಷ್ಟಿಯೇ; ಅದರಲ್ಲಿ ದೈವತ್ವದ ಕಾರ್ಯವೇನೂ ಇಲ್ಲ. ದುಷ್ಟರನ್ನು ಶಿಕ್ಷಿಸಲು ಹಾಗೂ ಶಿಷ್ಟರನ್ನು ರಕ್ಷಿಸಲು ದೈವವು ಬರುವುದಿಲ್ಲ. ದುಷ್ಟರು ತಮ್ಮ ದುಷ್ಕೃತ್ಯಗಳಿಂದ ತಮ್ಮ ಅವಸಾನವನ್ನು ತಾವೇ ತಂದುಕೊಳ್ಳುತ್ತಾರೆ. ಶಿಷ್ಟರು ತಮ್ಮ ಸತ್ಕಾರ್ಯಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಾರೆ ಹಾಗೂ ದುಷ್ಟರನ್ನು ಮುಗಿಸುತ್ತಾರೆ. ಈ ಎಲ್ಲ ಕಾರ್ಯಗಳೂ ಮನುಷ್ಯ ರೂಪಗಳಿಂದಲೇ ನಡೆಯುತ್ತವೆ, ಹಾಗೂ ಮುಂದೆ ಈ ಮನುಷ್ಯ ರೂಪಗಳೇ ದೈವತ್ವವನ್ನು ಪಡೆಯುತ್ತವೆ. ಇದಕ್ಕೆ ನಮ್ಮ ಪುರಾಣ ಹಾಗೂ ಇತಿಹಾಸಗಳೇ ಸಾಕ್ಷಿ.

ನೀರಿಗೆ ಸಕ್ಕರೆ ಹಾಕಿದಾಗ ಸಿಹಿಯಾಗುತ್ತದೆ, ನಿಂಬೆಹಣ್ಣು ಹಿಂಡಿದಾಗ ಹುಳಿಯಾಗುತ್ತದೆ ಹಾಗೂ ವಿಷ ಹಾಕಿದಾಗ ಕಹಿಯಾಗುತ್ತದೆ. ಈ ರುಚಿಗಳು ಅದನ್ನು ಸೇವಿಸುವವರಿಗೆ ವೇದ್ಯವೇ ಹೊರತು ನೀರಿಗಲ್ಲ, ನೀರು ನಿರ್ಲಿಪ್ತ. ಬೆಂಕಿಗೆ ಧೂಪ ಹಾಕಿದರೆ ಸುವಾಸನೆ ಬರುತ್ತದೆ ಹಾಗೂ ಮಲ ಹಾಕಿದರೆ ದುರ್ವಾಸನೆ ಬರುತ್ತದೆ. ಈ ಎರಡು ಕ್ರಿಯೆಗಳಿಗೂ ಕಾರಣ ನಾವು ಹಾಕುವ ವಸ್ತುವೇ ಹೊರತು ಬೆಂಕಿಯಲ್ಲ. ಹೇಗೆ ಸುಡುವುದು ಬೆಂಕಿಯ ಗುಣವೋ ಹಾಗೆಯೇ ಪ್ರಕೃತಿನಿಯಮವು ದೈವದ ಗುಣ. ಸಕಲ ಜೀವಗಳೂ ಇಲ್ಲಿ ನಿಮಿತ್ತ ಮಾತ್ರ. ಶಂಕರಾಚಾರ್ಯರು ಹೇಳಿದಂತೆ – "ಇದೆಲ್ಲವೂ ಒಂದು ಮಾಯೆ".

**ಹಾಗಿದ್ದರೆ ಈ ದೈವಶಕ್ತಿಯು ಏನು?:** ದೈವಶಕ್ತಿಯು ಉಳಿದೆಲ್ಲ ಶಕ್ತಿರೂಪಗಳಿಗೆ ಮೂಲವಾದುದು. ನ್ಯೂಟನ್ನನು ಕಂಡುಹಿಡಿಯುವ ಮೊದಲು ಕೂಡ ಗುರುತ್ವಾಕರ್ಷಣ ಶಕ್ತಿಯು ಈ ವಿಶ್ವದಲ್ಲಿತ್ತು. ಕೂಲಾಂಬ್, ಫ್ಯಾರಡೇ ಮೊದಲಾದ ವಿಜ್ಞಾನಿಗಳು ಕಂಡುಹಿಡಿಯುವ ಮೊದಲು ಕೂಡ ವಿದ್ಯುಚ್ಛಕ್ತಿಯು ಈ ಬ್ರಹ್ಮಾಂಡದಲ್ಲಿತ್ತು. ಈ ಎಲ್ಲ ಶಕ್ತಿಗಳಿಗೆ ಮೂಲವಾದ ದೈವಶಕ್ತಿಯನ್ನು ನಮ್ಮ ಪೂರ್ವಜರು ತಿಳಿದುಕೊಂಡಿದ್ದರು ಹಾಗೂ ಆ ಶಕ್ತಿಯ ಉಪಯೋಗವನ್ನು ಪಡೆದುಕೊಂಡಿದ್ದರು ಕೂಡ. ಹೇಗೆ ಗುರುತ್ವಾಕರ್ಷಣ ಶಕ್ತಿ ಹಾಗೂ ವಿದ್ಯುಚ್ಛಕ್ತಿಗಳ ಕೂಲಂಕಷ ಅಭ್ಯಾಸ ಸಾಮಾನ್ಯ ಮನುಷ್ಯನಿಂದ ಸಾಧ್ಯವಿಲ್ಲವೋ ಅದೇ ರೀತಿ ದೈವಶಕ್ತಿಯನ್ನು ಅರಿತುಕೊಳ್ಳುವುದು ಕೂಡ ಸಾಮಾನ್ಯರಿಂದ ಸಾಧ್ಯವಿಲ್ಲ. ಆದರೆ ಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕೆಂದರೆ ಅದರ ಅರಿವಿನ ಅಗತ್ಯವೇನು ಇಲ್ಲವಲ್ಲ! ಗುರುತ್ವಾಕರ್ಷಣ ಶಕ್ತಿ ಹಾಗೂ ವಿದ್ಯುಚ್ಛಕ್ತಿಗಳ ಬಗೆಗೆ ನಮಗೆ ಸಂಪೂರ್ಣ ಮಾಹಿತಿಯಿಲ್ಲದಿದ್ದರೂ ಕೂಡ ನಮ್ಮ ದೈನಂದಿನ ಜೀವನದಲ್ಲಿ ಬಹಳವಾಗಿ ಉಪಯೋಗಿಸಿಕೊಂಡಿದ್ದೇವೆ. ಅದೇ ತರಹ ದೈವಶಕ್ತಿಯ ಉಪಯೋಗವೂ ನಮ್ಮ ಜೀವನದಲ್ಲಿ ಅತ್ಯಗತ್ಯ; ಭೌತಿಕ ಸಮಸ್ಯೆಗಳ ಪರಿಹಾರಕ್ಕೋಸ್ಕರ.

ಮನುಷ್ಯಜೀವಿಯಲ್ಲಿ ಮೂರು ವರ್ಗಗಳಿವೆ – ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಪ್ರಬುದ್ಧರು, ಇವರ ಮಾತನ್ನು ನಂಬಿ ಬದುಕುವ ಮುಗ್ಧರು ಹಾಗೂ ಇವರಿಬ್ಬರ ತರಹವೂ ಅಲ್ಲದ ವಸ್ತುನಿಷ್ಠರು. ಇಂದಿನ ಯುಗದಲ್ಲಿ ನಾವು ಹೆಚ್ಚಾಗಿ ಕಾಣುತ್ತಿರುವುದು ಈ ವಸ್ತುನಿಷ್ಠ ಬುದ್ಧಿಜೀವಿಗಳನ್ನೇ (Materialistic intellectuals). ಇವರಿಗೆ ಜೀವನದಲ್ಲಿ ಅಂದುಕೊಂಡಂತೆ ಸುಖ ದೊರೆತರೆ ಆಗ ದೇವರನ್ನು ನಂಬುತ್ತಾರೆ; ವ್ಯತಿರಿಕ್ತವಾಗಿ ಕಷ್ಟ ಬಂದರೆ "ದೇವರೂ ಇಲ್ಲ, ದಿಂಡರೂ ಇಲ್ಲ" ಎನ್ನುತ್ತಾರೆ. ಇಂದ್ರಿಯಗಳಿಗೆ ಗೋಚರವಾಗುವಂಥದನ್ನು ಮಾತ್ರ ನಂಬುವ ಸಾಧಾರಣ ಮನುಷ್ಯರು ಇಂದ್ರಿಯಾತೀತವಾದ ದೈವವನ್ನು ನಂಬುವುದಿಲ್ಲ. ಆದರೆ ನಂಬಿಸುವುದು ಅಗತ್ಯವೆಂದು ಮನಗಂಡ ನಮ್ಮ ಪೂರ್ವಜರು ಅದಕ್ಕೆಂದೇ ಗ್ರಂಥಗಳನ್ನೂ, ಪುರಾಣಗಳನ್ನೂ, ಕಥೆಗಳನ್ನೂ ಬರೆದರು, ಹಾಗೂ ವಾಚಿಸಿದರು. ಆದರೆ ಆಧುನಿಕ ವಿಚಾರವಾದಿಯ ಋಣಾತ್ಮಕ ಆಲೋಚನೆಯಲ್ಲಿ (negative thinking) ಈ ಕಥೆಗಳೆಲ್ಲವೂ ಕಟ್ಟುಕತೆಗಳಾದವು. ದೈವವು ಇಲ್ಲವೆಂದು ನಿರೂಪಿಸುವ ನಾಸ್ತಿಕವಾದವು ತಯಾರಾಯಿತು. ಕಥೆಗಳ ನೈಜತೆಯ ಬಗ್ಗೆ ದ್ವಂದ್ವ ಬೆಳೆಯಿತೇ ಹೊರತು ಈ ಕಥೆಗಳ ಹಿಂದಿನ ಉದ್ದೇಶವು ಈ ಜನರಿಗೆ ಅರ್ಥವಾಗಲಿಲ್ಲ.

ಪ್ರಶ್ನಿಸಿ ತಿಳಿದುಕೊಳ್ಳದೆ ಜ್ಞಾನಾರ್ಜನೆಯಾಗುವುದಿಲ್ಲ. ಆದರೆ ಪ್ರತಿಯೊಂದನ್ನೂ ಪ್ರಶ್ನಿಸುವುದೇ ನಮ್ಮ ಸ್ವಭಾವವಾಗಬಾರದಲ್ಲ! ಬೆಂಕಿಯನ್ನು ಮುಟ್ಟಿದರೆ ಕೈಸುಡುವುದೆಂದು ಒಂದೋ ನಮ್ಮ ಹಿರಿಯರು ಹೇಳಿ ನಾವು ತಿಳಿಯಬೇಕು, ಇಲ್ಲವೇ ಸ್ವತಃ ಅನುಭವಿಸಿ ತಿಳಿಯಬೇಕು. ಅದೇ ತರಹ ದೈವವೆಂಬ ಶಕ್ತಿಯೊಂದು ಇದೆಯೆಂದು ಕೂಡ ಒಂದೋ ನಮ್ಮ ಸನಾತನ ಸಂಸ್ಕೃತಿಯಿಂದ ನಾವು ತಿಳಿಯಬೇಕು ಅಥವಾ ಅದರ ಅಸ್ತಿತ್ವವನ್ನು ಸ್ವತಃ ಅನುಭವಿಸಿ ತಿಳಿಯಬೇಕು.

ದೈವಶಕ್ತಿಯನ್ನು ಅನುಭವಿಸಿ ತಿಳಿಯುವುದು ಹೇಗೆ? ತಿಳಿಯಲು ಮಾರ್ಗಗಳು ಹಲವಾರು ಇವೆ. ಆದರೆ ದೈವಶಕ್ತಿಯನ್ನು ತಿಳಿಯುವ ಮೊದಲು ನಮ್ಮಲ್ಲಿರುವ ಶಕ್ತಿಯನ್ನೇ ನಾವು ತಿಳಿದುಕೊಳ್ಳೋಣ. ನಮ್ಮ ಐದು ಇಂದ್ರಿಯಗಳಿಗೆ ಮೀರಿದ ಒಂದು ಶಕ್ತಿ ನಮ್ಮ ದೇಹದಲ್ಲಿಯೇ ಇದೆ. ನಮಗರಿವಿಲ್ಲದೆಯೇ ಅದು ತನ್ನ ಕಾರ್ಯವನ್ನು ನಡೆಸಿಕೊಂಡು ಹೋಗುತ್ತಿದೆ. ಅದನ್ನು ತಿಳಿಯಲು ಒಂದು ಚಿಕ್ಕ ಪ್ರಯೋಗ ಮಾಡೋಣ:

ಬೆಳಿಗ್ಗೆ ಬೇಗ ಎದ್ದೇಳಬೇಕೆಂದು ಅಲಾರಂ ಇಟ್ಟುಕೊಳ್ಳುವುದು ಸಾಮಾನ್ಯ ಪದ್ಧತಿ. ಕೆಲವು ಸಾರಿ ಅಲಾರಂ ಶಬ್ದವಾದಾಗ ಕಷ್ಟಪಟ್ಟು ತೂಕಡಿಸಿಕೊಂಡು ಎದ್ದು, ಆಲಾರಂನ ತಲೆಯ ಮೇಲೊಂದು ಹೊಡೆದು, ಪುನಃ ಮಲಗುವುದೂ ಸಾಮಾನ್ಯ. ಆದರೆ ನಿಮ್ಮಲ್ಲಿರುವ ಶಕ್ತಿಯನ್ನು ನೀವು ಅರಿತರೆ ಅಲಾರಂನ ಅಗತ್ಯವಿಲ್ಲ. ರಾತ್ರಿ ಮಲಗಿದ ಮೇಲೆ ನಿದ್ದೆ ಬರುವ ಮೊದಲು "ಬೆಳಿಗ್ಗೆ 5 ಗಂಟೆಗೆ ಎದ್ದೇಳಬೇಕು" ಎಂದು ನೀವು ಅಂದುಕೊಳ್ಳಿ ನಿಮಗೆ ನೀವೇ ಆಜ್ಞೆಯನ್ನು ಕೊಟ್ಟುಕೊಳ್ಳಿ. ಬೆಳಿಗ್ಗೆ 5 ಗಂಟೆಗೆ ಯಾವ ಅಲಾರಂನ ಸಹಾಯವೂ ಇಲ್ಲದೆ ತನ್ನಿಂತಾನೆ ನಿಮಗೆ ಎಚ್ಚರವಾಗುತ್ತದೆ. ಅಲಾರಂ ಇಟ್ಟುಕೊಂಡಾಗ ಬಲವಂತವಾಗಿ ಎದ್ದೇಳಬೇಕಾಗುತ್ತಿತ್ತು; ಆದರೆ ಈ ವಿಧಾನದಿಂದ ಯಾವ ತೂಕಡಿಕೆಯೂ ಇಲ್ಲದೆ ಎಚ್ಚರವಾಗುತ್ತದೆ!

ಇದು ಹೇಗೆ ಸಾಧ್ಯವಾಯಿತು? ನಿಮಗೆ ನೀವೇ ಆಜ್ಞೆ ಕೊಟ್ಟುಕೊಂಡಿದ್ದರಿಂದ ತನ್ನಿಂತಾನೇ ಎದ್ದಿರಿ. ಅಂದರೆ ನಿಮ್ಮ ದೇಹ ಮಲಗಿದ್ದರೂ ಕೂಡ ನಿಮ್ಮ ಮನಸ್ಸು ಎಚ್ಚರವಾಗಿತ್ತು, ಅದಕ್ಕೆ ತಕ್ಕಂತೆ ನಿಮ್ಮ ದೈಹಿಕ ಗಡಿಯಾರ (body clock) ಕೂಡ ನಿರಂತರವಾಗಿ ಕೆಲಸ ಮಾಡುತ್ತಿತ್ತು. 5 ಗಂಟೆಯಾಗುತ್ತಿದ್ದಂತೆ ನಿಮ್ಮ ಮನಸ್ಸಿನಿಂದ ನಿಮ್ಮ ಮೆದುಳಿಗೆ "ದೇಹವನ್ನು ಎಚ್ಚರಿಸು" ಎಂಬ ಆಜ್ಞೆ ಹೋಯಿತು – ಅದರಿಂದಾಗಿ ನಿಮ್ಮ ಮೆದುಳು ತನ್ನ ಕೆಲಸ ಮಾಡಿದ್ದರಿಂದ ನಿಮಗೆ ಎಚ್ಚರವಾಯಿತು!

ಹಾಗಿದ್ದರೆ ಈ ಮನಸ್ಸು ಎಲ್ಲಿದೆ? ಹೆಚ್ಚಾಗಿ ತಿಳಿದುಕೊಂಡಿರುವಂತೆ ನಮ್ಮ ಮನಸ್ಸು ನಮ್ಮ ಮೆದುಳಿನಲ್ಲಿಲ್ಲ; ಮೆದುಳು ಒಂದು ಉಪಕರಣ ಮಾತ್ರ. ಮನಸ್ಸಿನಿಂದಾಗಿ ಮೆದುಳು ಕೆಲಸ ಮಾಡುತ್ತದೆಯೇ ಹೊರತು ಮೆದುಳಿನಿಂದ ಮನಸ್ಸಿನ ಉತ್ಪತ್ತಿಯಲ್ಲ. ಉದಾಹರಣೆಗೆ – ಕಂಪ್ಯೂಟರ್‌ನಲ್ಲಿ ಹಾರ್ಡ್‌ವೇರ್ ಹಾಗೂ ಸಾಫ್ಟ್‌ವೇರ್ ಎಂಬ ಎರಡು ಅಂಗಗಳಿವೆ. ಹಾರ್ಡ್‌ವೇರ್ ಕಣ್ಣಿಗೆ ಕಾಣಿಸುವಂಥದ್ದು ಹಾಗೂ ಸಾಫ್ಟ್‌ವೇರ್ ಕಾಣಿಸದಂಥದ್ದು. ಆದರೆ ಇವೆರಡೂ ಇಲ್ಲದಿದ್ದರೆ ಕಂಪ್ಯೂಟರ್ ಕೆಲಸ ಮಾಡುವುದಿಲ್ಲ. ಸಾಫ್ಟ್‌ವೇರ್ ಅನ್ನು ಹಾರ್ಡ್‌ವೇರ್‌ನ ಮುಖಾಂತರವೇ ಶೇಖರಿಸಿರುತ್ತಾರೆ (ಮೆಮೊರಿ ಚಿಪ್ಸ್). ಉಳಿದೆಲ್ಲಾ ಅಂಗಗಳನ್ನು ಸಿಪಿಯು (CPU-Central Processing Unit) ನಿಯಂತ್ರಿಸುತ್ತದೆ – ಅಂದರೆ, ಸಿಪಿಯು ಹಾಗೂ ಮೆಮೊರಿ ಚಿಪ್ಸ್ ಎರಡೂ ಸೇರಿ ಕಂಪ್ಯೂಟರಿನ ಮೆದುಳಿನಂತೆ ವರ್ತಿಸುತ್ತದೆ. ಆದರೆ ಸಾಫ್ಟ್‌ವೇರ್ ಎಂಬುದು ಶೇಖರಿಸಲ್ಪಡದಿದ್ದರೆ ಕಂಪ್ಯೂಟರ್ ಕೆಲಸ ಮಾಡುವುದಿಲ್ಲ.

ಅಂತೆಯೇ, ನಮ್ಮ ಜೀವವು ಒಂದು ಕಂಪ್ಯೂಟರಿನಂತೆ – ಇಲ್ಲಿ ದೇಹವು ಹಾರ್ಡ್‌ವೇರ್ ಹಾಗೂ ಮನಸ್ಸು ಸಾಫ್ಟ್‌ವೇರ್. ಆದರೆ ನಮ್ಮ ಹಾರ್ಡ್‌ವೇರ್‌ಗಿಂತಲೂ ನಮ್ಮ ಸಾಫ್ಟ್‌ವೇರ್ ಸಂಕೀರ್ಣ. ಮನಸ್ಸು ತನ್ನ ಕೆಲಸ ಮಾಡಲು ದೇಹವು ಒಂದು ಸಾಧನವಷ್ಟೇ. ಮನಸ್ಸನ್ನು ತಿಳಿಯಲು ಯತ್ನಿಸಿದಷ್ಟೂ ಅದು ಇನ್ನೂ ಕ್ಲಿಷ್ಟವಾಗುತ್ತಾ ಹೋಗುತ್ತದೆ. ಆದರೂ, ಅದನ್ನು ತಿಳಿಯಲು ಸಾಧ್ಯವಿದೆ. <u>ಮನಸ್ಸೆಂಬುದು ಇಂದ್ರಿಯಾತೀತವಾದರೂ ಕೂಡ ಅದು ಆತ್ಮಕ್ಕೆ ಗೋಚರ.</u> ಅಲಾರಂನ ಚಿಕ್ಕ ಉದಾಹರಣೆಯನ್ನೇ ತೆಗೆದುಕೊಂಡರೆ, ನಮ್ಮ ಒಂದು ಚಿಕ್ಕ ಆಜ್ಞೆ ನಮ್ಮನ್ನು ಎಬ್ಬಿಸುವಲ್ಲಿ ಶಕ್ತವಾಯಿತು. ಈ ಆಜ್ಞಾಶಕ್ತಿಯನ್ನು ಇತರ ಕೆಲಸಗಳಿಗೂ ಉಪಯೋಗಿಸುವಂತಿದ್ದರೆ ಪವಾಡವಾಗುವುದಿಲ್ಲವೇ? ಖಂಡಿತವಾಗಿ ಆಗುತ್ತದೆ. ಪವಾಡವೆಂಬುದು ಅತೀಂದ್ರಿಯ ಶಕ್ತಿಗಳಿಂದ ಆಗುವಂಥದಲ್ಲ. <u>ನಮ್ಮ ಮನಸ್ಸಿನ ಉದ್ದೇಶವು ವಸ್ತುಭೂತವಾಗಿ ಪರಿಣಮಿಸುವುದೇ ಪವಾಡ.</u> (Mind's intention gets materialised) ಇದು ನಮ್ಮ ಮನಸ್ಸಿನ ಶಕ್ತಿಯ ಚಿಕ್ಕ ಉದಾಹರಣೆಯಷ್ಟೆ; ಆದರೆ ಈ ಶಕ್ತಿಯ ಪ್ರಭಾವ ಅಪರಿಮಿತ. ಹಿಂದಿನ ಋಷಿಮುನಿಗಳು ವರ ಹಾಗೂ ಶಾಪಗಳನ್ನು ಕೊಡುತ್ತಿದ್ದುದು ತಮ್ಮ ಆಜ್ಞಾಶಕ್ತಿಯಿಂದಲೇ. ಪ್ರಯತ್ನಪಟ್ಟರೆ ಹಾಗೂ ಪ್ರಯತ್ನಕ್ಕೆ ತಕ್ಕಂತೆ ಸಾಧಿಸಿದರೆ ನಮ್ಮಲ್ಲಿ ಪ್ರತಿಯೊಬ್ಬರೂ ಕೂಡ ನಮ್ಮಲ್ಲಿನ ಶಕ್ತಿಯನ್ನು ತಿಳಿಯಬಹುದು, ಹಾಗೂ ಉಪಯೋಗಿಸಿಕೊಳ್ಳಬಹುದು. ಸ್ಥೂಲವಾಗಿ ಹೇಳಬೇಕೆಂದರೆ, ಜೀವ = ತನು + ಮನ + ಆತ್ಮ.

ಈ ಶಕ್ತಿ ನಮ್ಮ ಆತ್ಮಶಕ್ತಿಯೇ. ನಮ್ಮ ಆತ್ಮಶಕ್ತಿಯನ್ನು ತಿಳಿಯಲು ಇನ್ನೂ ಕೆಲವು ಪ್ರಯೋಗಗಳಿವೆ – ಆದರೆ ಅವೆಲ್ಲವುಗಳ ವಿವರಣೆ ಇಲ್ಲಿ ಅಪ್ರಸ್ತುತ. ತಿಳಿಯಬೇಕೆಂಬ ಜ್ಞಾನಪಿಪಾಸುಗಳಿಗೆ ದಾರಿಗಳು ಹಲವಿವೆ. ಅವುಗಳನ್ನು ಸ್ವಲ್ಪ ನಂತರ ತಿಳಿಯೋಣ. ಈಗ ತಿಳಿಯುವುದೇನೆಂದರೆ – ಒಂದು ಜೀವಾತ್ಮದಲ್ಲಿರುವ ಶಕ್ತಿಯಿಂದ ನಮಗೆ ಉಪಯೋಗವಾಗುವಂತಿದ್ದರೆ, ಸಕಲ ಜೀವಾತ್ಮಗಳೂ ಸೇರಿ ಎಂಥ ಅಪರಿಮಿತಿ ಶಕ್ತಿ ಇರಲಿಕ್ಕಿಲ್ಲ! ಈ ಎಲ್ಲಾ ಜೀವಾತ್ಮಗಳಿಗೂ ಮೂಲವಾದ ಪರಮಾತ್ಮದ ಶಕ್ತಿ ಎಷ್ಟಿರಲಿಕ್ಕಿಲ್ಲ!! <u>ಪರಮಾತ್ಮದ ಉದ್ದೇಶವು ವಸ್ತುಭೂತವಾಗಿ ಪರಿಣಮಿಸಿದುದೇ ಈ ಪ್ರಪಂಚ.</u> ಇಲ್ಲಿ ಹುಟ್ಟಿಬಂದ ಪವಾಡ ಪುರುಷರೆಲ್ಲರೂ ತಮ್ಮಲ್ಲಿನ ಈ ಶಕ್ತಿಯನ್ನು ಅರಿತುಕೊಂಡಿದ್ದರು. ಯೇಸುಕ್ರಿಸ್ತನು ತನ್ನ ಈ ಶಕ್ತಿಯಿಂದ ಕುಷ್ಠರೋಗಿಗಳನ್ನು ಗುಣಪಡಿಸಿದ ಹಾಗೂ ಪ್ರಪಂಚಕ್ಕೆ ಪ್ರೀತಿಯ ಸಂದೇಶವನ್ನಿತ್ತ. ತನ್ನ ಶಕ್ತಿಯಿಂದಲೇ ಸಾಯಿಬಾಬಾನು ನೀರಿನಿಂದ ದೀಪವನ್ನು ಬೆಳಗಿಸಿದ. ತನ್ನ ಪ್ರಾರ್ಥನೆ ಮಾತ್ರದಿಂದಲೇ ಕನಕದಾಸರು ಕೃಷ್ಣನು ತನ್ನ ಕಡೆ ತಿರುಗುವಂತೆ ಮಾಡಿದರು. ಈ ತರಹದ ಘಟನೆಗಳು ನಮ್ಮ ಪ್ರಪಂಚದ ಇತಿಹಾಸದಲ್ಲಿ ಬಹಳಷ್ಟಿವೆ. ವಸ್ತುನಿಷ್ಠವಾದವನ್ನು ಬಿಟ್ಟು ಅವಲೋಕಿಸಿದಾಗ ಮಾತ್ರ ಈ ಘಟನೆಗಳ ನೈಜತೆ ಅರಿವಾಗುತ್ತದೆ.

ಪವಾಡವೆನಿಸುವಂತಹ ಘಟನೆಗಳು ಹಿಂದೆಯೂ ನಡೆದಿವೆ, ಇಂದೂ ನಡೆಯುತ್ತಿವೆ, ಮುಂದೆಯೂ ನಡೆಯುತ್ತಿರುತ್ತವೆ. ಆದರೆ ಅವುಗಳ ನೈಜತೆಯನ್ನು ಅರಿಯುವುದು ಅಥವಾ ಅಲ್ಲಗಳೆಯುವುದು ನಮ್ಮ ನಮ್ಮ ಆಯ್ಕೆ. ವಿಚಾರಿಸುವ ಹಾಗೂ ವಿಮರ್ಶಿಸುವ ಬುದ್ಧಿಯು ನಮ್ಮಲ್ಲಿ ಪ್ರತಿಯೊಬ್ಬರಿಗೂ ಇದೆ. ಆದರೆ ಸತ್ಯವನ್ನು ಸತ್ಯದಂತೆಯೇ ತಿಳಿಯುವ ವಿವೇಚನೆಗೆ ಮಾತ್ರ ನಮ್ಮಲ್ಲಿ ಕೊರತೆಯಿದೆ. ಕವಿ ಟಿ.ಎಸ್.ಇಲಿಯಟ್ ಹೇಳಿರುವಂತೆ – ಹೇಳುವವನ ಉದ್ದೇಶ ಹಾಗೂ ಕೇಳುವವನ ಅರಿವು; ಇವುಗಳ ನಡುವೆ ನೆರಳಿದೆ (Between the intention and the comprehension lies the shadow). ಪ್ರಶ್ನಿಸುತ್ತಾ, ಉತ್ತರಗಳನ್ನು ತಿಳಿಯುತ್ತಾ ಮುಂದುವರೆಯುವುದೇ ಮನುಷ್ಯ ಪ್ರಜ್ಞೆಯ ಲಕ್ಷಣ.

**ಆತ್ಮಶಕ್ತಿಯನ್ನು ಅರಿಯುವುದು ಹೇಗೆ?:** ಮೊದಲನೆಯದಾಗಿ ನಂಬಿಕೆ, ಎರಡನೆಯದಾಗಿ ಪ್ರಯತ್ನ ಹಾಗೂ ನಂತರ ಸತತ ಸಾಧನೆ – ಈ ಮೂರರಿಂದ ಆತ್ಮಶಕ್ತಿಯ ಅರಿವು ಸಾಧ್ಯ. ಮರದಲ್ಲಿ ಹಣ್ಣು ಇರುವುದನ್ನು ಒಪ್ಪುವುದು ನಂಬಿಕೆ. ಆ ಹಣ್ಣಿಗಾಗಿ ಮರವನ್ನು ಹತ್ತುವುದು ಪ್ರಯತ್ನ. ಮರವನ್ನು ಹತ್ತಿ ಹಣ್ಣನ್ನು ಕೀಳುವುದು ಸಾಧನೆ. ಆದರೆ ನಂತರ ಆತ್ಮಶಕ್ತಿಯ ಹಣ್ಣು ಖಂಡಿತವಾಗಿಯೂ ನಿಮ್ಮದು. ಅದನ್ನು ಒಬ್ಬರೇ ಆದರೂ ತಿನ್ನಿ, ಅಥವಾ ಹಂಚಿಯಾದರೂ ತಿನ್ನಿ – ಆ ಆಯ್ಕೆಯೂ ನಿಮ್ಮದು. ನಮ್ಮಲ್ಲಿನ ಅನೇಕ ಜ್ಞಾನಿಗಳು ತಮ್ಮ ಸಾಧನೆಗಳನ್ನು ಗುಟ್ಟಾಗಿರಿಸಿಕೊಂಡರು. ಅದರಿಂದಾಗಿ ಅವರ ಸಾಧನೆಗಳು ಅವರೊಂದಿಗೇ ಅಳಿದುಹೋದವು. ಆದರೆ ತಮ್ಮ ಸಾಧನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವಂಥ ಮಹಾಪುರುಷರೂ ಇಲ್ಲಿ ಇದ್ದುದರಿಂದ ನಮ್ಮ ಸನಾತನ ಸಂಸ್ಕೃತಿಯು ಸಂಪದ್ಭರಿತವಾಯಿತು.

ನಮ್ಮ ಸಂಸ್ಕೃತಿಯಲ್ಲಿರುವ ಯೋಗಮಾರ್ಗಗಳೆಲ್ಲವೂ ಆತ್ಮಶಕ್ತಿಯನ್ನು ಅರಿಯುವ ಹಾಗೂ ಅನುಭವಿಸುವ ರೀತಿಯನ್ನು ತಿಳಿಸುತ್ತವೆ. ಮಹರ್ಷಿ ಪತಂಜಲಿಯ ಅಷ್ಟಾಂಗಯೋಗ, ಆಚಾರ್ಯಶ್ರೇಷ್ಠರ ಧ್ಯಾನಯೋಗ, ದಾಸಶ್ರೇಷ್ಠರ ಭಕ್ತಿಯೋಗ, ನಂತರದ ಜ್ಞಾನಯೋಗ, ಹಠಯೋಗಗಳೆಲ್ಲವೂ ದೈವದ ಕಡೆಗೆ ನಡೆಯುವ ದಾರಿಗಳು. ಈ ದಾರಿಗಳು ಕಷ್ಟವೆನ್ನುವವರಿಗೆ ಇನ್ನೂ ಸುಲಭದ ದಾರಿಗಳು ಈ ಯುಗದಲ್ಲಿವೆ – ವಿಪಶ್ಯನ, ರೇಕಿ, ಟ್ರಾನ್ಸೆಂಡೆಂಟಲ್ ಧ್ಯಾನ, ಪ್ರಾಣಿಕ್ ಹೀಲಿಂಗ್, ಸಿಲ್ವಾ ವಿಧಾನ ಮುಂತಾದ ಅನೇಕ ತ್ವರಿತ ಮಾರ್ಗಗಳನ್ನು ತೋರಿಸುವ ಸಂಘ, ಸಂಸ್ಥೆಗಳು ಕೂಡ ನಮ್ಮ ಸುತ್ತಮುತ್ತಲೂ ಇವೆ. ಇವ್ಯಾವುದೂ ಬೇಡ, ಆತ್ಮಶಕ್ತಿಯ ಅರಿವು ಒಂದೇ ಸಾಕು ಎನ್ನುವವರಿಗೆ ಭಗವದ್ಗೀತೆಯ ಅಧ್ಯಯನವೊಂದೇ ಸಾಕು. ನಮಗಿಷ್ಟವಾದ ದಾರಿಯನ್ನು ಆರಿಸಿಕೊಳ್ಳುವ ಆಯ್ಕೆ ನಮ್ಮದಾಗಿದೆ. ಆದರೆ ಈ ಎಲ್ಲ ಮಾರ್ಗಗಳ ತತ್ವವು ಒಂದೇ – **ಆತ್ಮವು ಧ್ಯಾನಕ್ಕೆ ಗೋಚರ.**

ಮಹರ್ಷಿ ಪತಂಜಲಿಯು ನೀಡಿರುವ ಅಷ್ಟಾಂಗಯೋಗ ಸೂತ್ರಗಳ ಉಪಯೋಗದಿಂದ ನಮ್ಮಲ್ಲಿ ಪ್ರತಿಯೊಬ್ಬರೂ ಕೂಡ ತಮ್ಮ ಆತ್ಮಶಕ್ತಿಯನ್ನು ತಿಳಿಯಬಹುದು. ಆದರೆ ಇಂದಿನ ದಿನಗಳ ವಿಪರ್ಯಾಸವೆಂದರೆ, ಜ್ಞಾನಾರ್ಜನೆಗಿಂತಲೂ ಧನಾರ್ಜನೆಯೇ ಮುಖ್ಯವಾಗಿ ಹೋಗಿದೆ. ಅದರಿಂದಾಗಿ ನಮ್ಮ ಪಾಠಶಾಲೆಗಳು ಹಾಗೂ ದೇವಸ್ಥಾನಗಳು ಕೂಡ ಇಂದು ಧನಾರ್ಜನೆಯ ಪ್ರಮುಖ ಉದ್ಯಮಕೇಂದ್ರಗಳಾಗಿವೆ. ಪ್ರಾಯವಿರುವಷ್ಟು ದಿನವೂ ಹಣಸಂಪಾದನೆಯಲ್ಲಿ ನಿರತರಾಗಿ, ಇಷ್ಟಬಂದಂತೆ ಬದುಕಿ, ದೇಹ ಹಾಗೂ ಮನಸ್ಸುಗಳನ್ನು ಕೆಡಿಸಿಕೊಂಡು – ನಂತರ ಮುದುಕರಾದ ಮೇಲೆ ಯೋಗವನ್ನು ಕಲಿಯುವುದು ಇಂದಿನ ರೀತಿಯಾಗಿದೆ. ಆದರೆ ಯೋಗವು ವಯಸ್ಸಾದ ನಂತರ ಕಲಿಯುವ ವಿದ್ಯೆಯಲ್ಲ, ವಯಸ್ಸಿಗೆ ಬರುವ ಮೊದಲೇ ಕಲಿಯುವ ವಿದ್ಯೆ ಎಂಬ ಅರಿವು ನಮಗೆ ಬರಬೇಕು. ಚಿಕ್ಕ ವಯಸ್ಸಿನಲ್ಲಿ ಯೋಗವನ್ನು ಕಲಿತರೆ ಆತ್ಮಶಕ್ತಿಯ ಅರಿವು ಹಾಗೂ ಅದರ ಉಪಯೋಗಕ್ಕೆ ಬಹಳಷ್ಟು ಸಮಯವು ಇರುತ್ತದೆ. ಹೆಸರಿಸಲು ಸಾಧ್ಯವಿಲ್ಲದಷ್ಟು ವಿಚಿತ್ರ ಖಾಯಿಲೆಗಳು ಹುಟ್ಟಿಕೊಂಡಿರುವ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಯೋಗವೊಂದೇ ನಮ್ಮನ್ನು ಉಳಿಸಬಲ್ಲುದು ಹಾಗೂ ಬೆಳೆಸಬಲ್ಲುದು.

**ಎಲ್ಲ ಮಾರ್ಗವೂ ಒಂದೇ ಕಡೆಗೆ :** ಇನ್ನು ಪ್ರಶ್ನಿಸುವುದನ್ನು ನಿಲ್ಲಿಸಿ, ಕೆಲವು ಉತ್ತರಗಳನ್ನು ತಿಳಿಯೋಣ. ದೈವದ ಅನ್ವೇಷಣೆಯನ್ನು ಹಾಗೂ ತನ್ನ ಮೂಲವನ್ನು ಮನುಷ್ಯ ತನಗೆ ಬುದ್ಧಿ ತಿಳಿದಾಗಿನಿಂದಲೂ ಮಾಡುತ್ತಾ ಬಂದಿದ್ದಾನೆ. ತಿಳಿದು ಬಂದ ತತ್ತ್ವವನ್ನು ತನ್ನದೇ ರೀತಿಯಲ್ಲಿ ಪಾಲಿಸುತ್ತಾ, ಪುನರ್ಜೀವನಗೊಳಿಸುತ್ತಾ ಬಂದಿದ್ದಾನೆ. ಯುಗಯುಗಗಳಲ್ಲೂ ಕೆಲವು ಮಹಾಪುರುಷರು ಈ ತತ್ತ್ವಗಳಿಗೆ ತಮ್ಮದೇ ಆದ ವ್ಯಾಖ್ಯಾನಗಳನ್ನು ಕೊಡುತ್ತಾ ಬಂದಿದ್ದಾರೆ. ಇದರಿಂದಾಗಿ, ಮೊದಲು ಒಂದೇ ಅನ್ವೇಷಣೆಯಾಗಿದ್ದ ದೈವಶಕ್ತಿಯು ನಂತರ ವಿಭಿನ್ನ ತತ್ತ್ವಗಳಿಂದ ವಿಭಿನ್ನ ರೂಪಗಳನ್ನು ಪಡೆಯಿತು. ಕಾಲಕ್ರಮೇಣ ತತ್ತ್ವಪ್ರತಿಪಾದಕ ಮಹಾಪುರುಷರುಗಳು ಕೂಡ ಜನರ ಮನಸ್ಸುಗಳಲ್ಲಿ ದೈವರೂಪವನ್ನೇ ಪಡೆದರು. ರಾಮ, ಕೃಷ್ಣ, ಬುದ್ಧ, ಕ್ರಿಸ್ತ, ರಾಘವೇಂದ್ರ, ಸಾಯಿಬಾಬಾ – ಇವರೆಲ್ಲರೂ ದೈವತ್ವದ ಮನುಷ್ಯರೂಪಗಳು; ಫಲಾಪೇಕ್ಷೆಯಿಲ್ಲದೆ ಪ್ರೀತಿಸುವ ನಿರ್ವ್ಯಾಜಪ್ರೇಮವೇ ದೈವಧರ್ಮವೆಂದು ತಿಳಿದವರು.

ಈ ಎಲ್ಲ ಮಹಾಪುರುಷರು ತಮ್ಮಲ್ಲಿನ ಆತ್ಮಶಕ್ತಿಯನ್ನು ಅರಿತುಕೊಂಡಿದ್ದರು ಹಾಗೂ ಅದನ್ನು ತಮ್ಮ ಕಾರ್ಯಗಳಿಗೆ ತಕ್ಕಂತೆ ಉಪಯೋಗಿಸಿಕೊಂಡಿದ್ದರು. ರಾಮ ಹಾಗೂ ಕೃಷ್ಣರು ತಮ್ಮ ಶಕ್ತಿಯನ್ನು ದುಷ್ಟಸಂಹಾರ ಹಾಗೂ ಧರ್ಮಪರಿಪಾಲನೆಗೆ ಬಳಸಿಕೊಂಡರು. ಬುದ್ಧ ಹಾಗೂ ಕ್ರಿಸ್ತರು ತಮ್ಮ ಶಕ್ತಿಯನ್ನು ಸಕಲರ ಆರೋಗ್ಯಕ್ಕೆ ಹಾಗೂ ತಿಳಿವಿಗೆ ಬಳಸಿಕೊಂಡರು. ರಾಘವೇಂದ್ರ ಹಾಗೂ ಸಾಯಿಬಾಬಾರು ಸಾಮಾನ್ಯ ಜನರಂತೆ ಅವರ ನಡುವೆಯೇ ಬದುಕಿ ದೈವಮಟ್ಟವನ್ನು ತೋರಿಸುವಲ್ಲಿ ಯಶಸ್ವಿಯಾದರು. ಇವರೆಲ್ಲರಿಗೂ ತಮ್ಮ ಆತ್ಮಶಕ್ತಿಯ ಸಾರ್ವಜನಿಕ ಉಪಯೋಗ ಹಾಗೂ ತಿಳುವಳಿಕೆಗಳು ಜೀವನದ ಗುರಿಯಾಗಿದ್ದವು. ಆದರೆ ಸಾಮಾನ್ಯ ಜನರ ತಪ್ಪು ತಿಳುವಳಿಕೆಗಳಿಂದಾಗಿ ಈ ಮಹಾಪುರುಷರ ತತ್ತ್ವಗಳು ತಿರುಚಿಕೊಳ್ಳಲ್ಪಟ್ಟವು. ಜನರಿಗೆ ದೈವಶಕ್ತಿಯು ಮುಖ್ಯವಾಗುವ ಬದಲು ತಾವು ನಂಬಿದ ಪುರುಷರುಗಳು ಮುಖ್ಯವಾದರು. ಇದರಿಂದಾಗಿ ತಮ್ಮ ತಮ್ಮ ದೇವರುಗಳೇ ಹೆಚ್ಚೆಂಬ ಮೂಢನಂಬಿಕೆ ಬೆಳೆಯಿತು. "ಎಲ್ಲ ದೇವರೂ ಒಂದೇ" ಎಂಬ ಮೂಲತತ್ತ್ವವನ್ನು ಅವರು ಮರೆತರು. ತಮ್ಮ ತಮ್ಮ ನಂಬಿಕೆಗಳಿಂದಾಗಿ ಇನ್ನಷ್ಟು ಜಾತಿ, ಪಂಗಡಗಳನ್ನು ಮನುಷ್ಯ ಕುಲದಲ್ಲಿ ಹುಟ್ಟಿಸುವುದರಲ್ಲಿ ಅವರು ಯಶಸ್ವಿಯಾದರು. ಆದರೆ ಎಲ್ಲಕ್ಕೂ ಮೂಲವಾದ ದೈವತ್ವವನ್ನು ಬಹುಶಃ ಅವರು ಇಂದಿಗೂ ಅರಿತಿಲ್ಲ!

ಹಿಂದೂ ಧರ್ಮದಲ್ಲಿ ನೂರಾರು ದೇವರುಗಳಿದ್ದು, ಅದರಿಂದ ನೂರಾರು ಜಾತಿಗಳು ಹುಟ್ಟಿದ್ದು ಹೀಗೆ. ಪುರಾತನದಲ್ಲಿ ಒಬ್ಬ ಮನುಷ್ಯ ಶಿವನನ್ನು ಆರಾಧಿಸಿದರೆ, ನಂತರ ಅವನ ಸಂತತಿಯ ಜನರೆಲ್ಲರೂ ಶೈವರಾದರು. ಒಬ್ಬ ವಿಷ್ಣುವನ್ನು ಆರಾಧಿಸಿದರೆ ನಂತರದವರೆಲ್ಲರೂ ವೈಷ್ಣವರಾದರು. ಈ ಜಾತಿಗಳಲ್ಲೂ ಕೂಡ ವಿಭಿನ್ನ ನಂಬಿಕೆಗಳಿಂದ ಉಪಪಂಗಡಗಳ ಸೃಷ್ಟಿಯಾಯಿತು. ಹೀಗೆ ಒಂದೊಂದು ನಂಬಿಕೆಯಿಂದ ಒಂದೊಂದು ಪಂಗಡದ ಸೃಷ್ಟಿಯಾದುದು ಈ ಯುಗದ ವಿಪರ್ಯಾಸ. ಈ ಪಂಗಡಗಳ ನಡುವೆ ತಮ್ಮ ತಮ್ಮ ಧರ್ಮ, ದೇವರುಗಳೇ ಹೆಚ್ಚೆಂಬ ವಾಗ್ವಾದ ಬೆಳೆದುದು ಇನ್ನೊಂದು ಅವಾಂತರ. ಆದರೆ, ಮೊದಲೇ ತಿಳಿಸಿದಂತೆ, ಎಲ್ಲಾ ದೇವರುಗಳೂ ಒಂದೇ ಶಕ್ತಿಯ ವಿವಿಧ ರೂಪಗಳು. ನೀರು ಎಲ್ಲಿಗೆ ಹರಿದುಕೊಂಡು ಹೋದರೂ ಕೂಡ ಅದು ನೀರೇ. ಅದನ್ನು ನಾವು ನೀರು ಎಂದು ಕರೆದರೆ, ಉತ್ತರ ಭಾರತದಲ್ಲಿ ಪಾನಿ ಎನ್ನುವರು, ಪಾಶ್ಚಾತ್ಯರು ವಾಟರ್ ಎನ್ನುವರು. ಹಾಗೆಂದ ಮಾತ್ರಕ್ಕೆ ನೀರಿಗಿಂತ ಪಾನಿ ಹೆಚ್ಚು, ಪಾನಿಗಿಂತ ವಾಟರ್ ಹೆಚ್ಚು ಎಂದು ಹೇಳಲು ಸಾಧ್ಯವೇ? ಅದೇ ತರಹ ಎಲ್ಲ ದೇವರುಗಳು ಒಂದೇ; **ಸಕಲ ಜೀವಾತ್ಮಗಳನ್ನು ಒಳಗೊಂಡಿರುವ ಅದುವೇ ಪರಮಾತ್ಮ.**

ರುದ್ರಾಧ್ಯಾಯದಲ್ಲಿ ಯಾಜ್ಞವಲ್ಕ್ಯನು ಹೇಳಿರುವಂತೆ – ಶತರುದ್ರೀಯಣ; ಅಂದರೆ ಒಂದೇ ದೈವವು ನೂರು ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ. ಭಗವದ್ಗೀತೆಯ ಅಧ್ಯಾಯ – 17 ರಲ್ಲಿ ಶ್ರೀ ಕೃಷ್ಣನು ಹೇಳಿರುವಂತೆ –

**ಸತ್ತ್ವಾನುರೂಪಾ ಸರ್ವಸ್ವ ಶ್ರದ್ಧಾ ಭವತಿ ಭಾರತ।**
**ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ॥**
**ಯಜಂತೇ ಸಾತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ।**
**ಪ್ರೇತಾನ್ ಭೂತಗಣಾಂಶ್ಚಾನ್ಯೇ ಯಜಂತೇ ತಾಮಸಾ ಜನಾಃ॥**

ಅಂದರೆ – ಎಲ್ಲರ ಶ್ರದ್ಧೆಯು ಅವರ ಅಂತಃಕರಣಕ್ಕೆ ಅನುರೂಪವಾಗಿರುತ್ತದೆ. ಸ್ವಭಾವಕ್ಕೆ ತಕ್ಕಂತೆ ಅವರ ನಂಬಿಕೆಯೂ ಇರುತ್ತದೆ. ಸಾತ್ತ್ವಿಕರು ದೇವತೆಗಳನ್ನೂ ರಾಜಸರು ಯಕ್ಷರಾಕ್ಷಸರನ್ನೂ ಹಾಗೂ ತಾಮಸರು ಭೂತಗಣಗಳನ್ನೂ ಪೂಜಿಸುತ್ತಾರೆ.

ಈ ಮಾತಿಗೆ ಜ್ವಲಂತ ಉದಾಹರಣೆಗಳು ನಮ್ಮ ಸುತ್ತಮುತ್ತಲೂ ಇವೆ. ಅವರವರ ನಂಬಿಕೆಗಳಿಗೆ ತಕ್ಕಂತೆ ಪೂಜಾವಿಧಾನಗಳು ಸಹ ರೂಢಿಯಲ್ಲಿವೆ. ಗಣೇಶನಿಗೆ ಬೆಣ್ಣೆಯ ಅಲಂಕಾರವಾದರೆ, ಭೈರವನಿಗೆ ಸಾರಾಯಿಯ ನೈವೇದ್ಯ ನಡೆಯುತ್ತದೆ. ನಮ್ಮ ನಾಡಿನ ಕೆಲವು ಕಡೆ ಧೂಪದ ಬದಲು ಸಿಗರೇಟು, ಬೀಡಿ ಹಚ್ಚಿ ಪೂಜಿಸುವಂಥ ದೇವರುಗಳೂ ಇವೆ. ದಕ್ಷಿಣಕನ್ನಡದಲ್ಲಂತೂ ವೈವಿಧ್ಯಮಯ ದೈವೀಕ ಸಂಪ್ರದಾಯವಿದೆ. ಊರಿಗೊಬ್ಬ ಮುಖ್ಯ ದೇವತೆಯಿದ್ದರೆ ಮನೆಗಳಲ್ಲಿ ಭೂತಗಳ ಹಾಗೂ ನಾಗದೇವತೆಯ ಆರಾಧನೆ ನಡೆಯುತ್ತದೆ. ಕೆಲವೊಂದು ಭೂತಗಳನ್ನು ಆಯಾಯ ಕಾರ್ಯಕ್ಕೋಸ್ಕರ ಆರಾಧಿಸುವ ರೀತಿಯೂ ಇದೆ. ಉದಾಹರಣೆಗೆ ಗೋವುಗಳ ರಕ್ಷಣೆಗೊಬ್ಬ, ಮನೆಯ ರಕ್ಷಣೆಗೊಬ್ಬ, ಸಕಲ ಸಂಪತ್ತಿನ ರಕ್ಷಣೆಗೊಬ್ಬ ಇತ್ಯಾದಿ. ಈ ಭೂತಗಳ ಸಂತೃಪ್ತಿಗಾಗಿ ಪ್ರಾಣಿ ಬಲಿಗಳ ಜೊತೆಗೆ – ಈ ಭೂತಗಳನ್ನು ಆವಾಹನೆ ಮಾಡಿಕೊಳ್ಳಲು ಒಂದು ಪಂಗಡವೇ ಮೀಸಲಾಗಿದೆ.

ವಿವಿಧ ದೇವರುಗಳನ್ನು ನಂಬಿದ್ದರಿಂದ ನಮಗೆ ಲಾಭಗಳು ಕೂಡ ಬಹಳಷ್ಟಾಗಿವೆ. ಧರ್ಮಸ್ಥಳದ ಮಂಜುನಾಥನನ್ನು ಪ್ರಾರ್ಥಿಸಿದ್ದರಿಂದ ಸಮಸ್ಯೆಗಳು ಪರಿಹಾರವಾದ ದೃಷ್ಟಾಂತಗಳು ತುಂಬಾ ಇವೆ. ಮಂತ್ರಾಲಯದ ಗುರು ರಾಘವೇಂದ್ರರ ದರ್ಶನದಿಂದ ಜೀವನದಲ್ಲಿ ಮುಂದುವರಿದವರ ಪಟ್ಟಿಯೂ ಇದೆ. ಆದರೆ ಭಕ್ತಿಯುತವಾದ ಪ್ರಾರ್ಥನೆಯು ಎಲ್ಲೆಡೆಯೂ ಪ್ರಾಮುಖ್ಯ. ನೀವು ಯಾವ ರೂಪವನ್ನಾದರೂ ಪ್ರಾರ್ಥಿಸಿ, ಕೊಡುವ ದೈವವು ಒಂದೇ – **ಅದು ನಿಮ್ಮೊಳಗೇ ಇರುವ ಪರಮಾತ್ಮ.**

ಪರಮಾತ್ಮವು ಎಲ್ಲ ಶಕ್ತಿಗಳಿಗೂ ಮೂಲವಾದುದರಿಂದ ಅದನ್ನು ಪೂರ್ವಜರು ಆದಿಶಕ್ತಿಯೆಂದು ಕರೆದರು. ಅದನ್ನು ಪ್ರಾರ್ಥಿಸಲು ಹಾಗೂ ಪೂಜಿಸಲು ರೂಪವೊಂದು ಬೇಕಾದುದರಿಂದ ಅಪರಿಮಿತ ಬಾಹುಗಳುಳ್ಳ ಮೂರ್ತಿಯಾಗಿ ರೂಪಿಸಿದರು. ಮನುಷ್ಯರು ಹುಟ್ಟುವುದು ಹೆಣ್ಣಿನ ಗರ್ಭದಿಂದಲಾದುದರಿಂದ ಈ ಶಕ್ತಿಯನ್ನು ಹೆಣ್ಣಿನಂತೆ ಕಲ್ಪಿಸಿದರು. ಆದರೆ ಇತರ ಎಲ್ಲ ನೈಸರ್ಗಿಕ ಶಕ್ತಿಗಳಂತೆ (ಗುರುತ್ವಾಕರ್ಷಣ, ವಿದ್ಯುತ್, ಉಷ್ಣ ಇತ್ಯಾದಿ) ಈ ಶಕ್ತಿಗೂ ಲಿಂಗವಿಲ್ಲ. ಅಂದರೆ ಪರಮಾತ್ಮವು ನಿರ್ಲಿಂಗ, ನಿರ್ಗುಣ ಹಾಗೂ ನಿರಾಕಾರ. ನಾವು ಯಾವ ರೀತಿ ಈ ಶಕ್ತಿಯನ್ನು ಉಪಯೋಗಿಸುತ್ತೇವೋ ಆ ರೀತಿಯೇ ನಮಗೆ ಫಲ. ಈ ಶಕ್ತಿ ಯಾವ ರೀತಿ ಇದೆ ಅಂದುಕೊಂಡು ನೀವು ಪೂಜಿಸುತ್ತೀರೋ ಆ ರೂಪದಲ್ಲಿ ಅದು ನಿಮಗೆ ಸಾಕ್ಷಾತ್ಕಾರವಾಗುತ್ತದೆ. ಅದು ರಾಮನಿರಬಹುದು, ಕೃಷ್ಣನಿರಬಹುದು, ರಾಘವೇಂದ್ರನಿರಬಹುದು, ಭೈರವನಿರಬಹುದು ಅಥವಾ ಪಂಜುರ್ಲಿಭೂತವೂ ಇರಬಹುದು. ಇವೆಲ್ಲವೂ ಮೂಲರೂಪದ ವಿವಿಧ ಆಯಾಮಗಳು; ರೂಪದ ಆಯ್ಕೆ ನಿಮ್ಮದು.

ಋಷಿಗಳಿಗೆ ಒಮ್ಮೆ ತಪೋಬಲ ಪ್ರಾಪ್ತಿಯಾದ ಮೇಲೆ ಅವರು ಅದನ್ನು ವರಕ್ಕೂ ಉಪಯೋಗಿಸಬಹುದು ಹಾಗೂ ಶಾಪಕ್ಕೂ ಪ್ರಯೋಗಿಸಬಹುದು. ಆಯ್ಕೆ ಅವರವರದು, ಅಂತೆಯೇ ಫಲವೂ ಅವರವರದು. ಒಬ್ಬ ಹಿರಿಯರು ಹೇಳಿರುವಂತೆ – ನೀವು ಶಪಿಸಿದಾಗ ಅಥವಾ ಆಶೀರ್ವದಿಸಿದಾಗ, ಅದರ ಸ್ವಲ್ಪ ಅಂಶ ನಿಮ್ಮಲ್ಲೇ ಉಳಿಯುತ್ತದೆ; ಅಂದರೆ ನಿಮ್ಮ ಮನಸ್ಸಿನೊಳಗೆ (When you bless somebody, part of the blessing remains with you. When you curse somebody, part of the curse remains with you). ಹೆಚ್ಚು ಹೆಚ್ಚಾಗಿ ನೀವು ಆಶೀರ್ವದಿಸಿದಷ್ಟೂ ನಿಮ್ಮಲ್ಲಿ ಧನಾತ್ಮಕ ಕಂಪನಗಳು (Positive vibrations) ಬೆಳೆಯುತ್ತವೆ; ಹೆಚ್ಚುಹೆಚ್ಚಾಗಿ ನೀವು ಶಪಿಸಿದಷ್ಟೂ ನಿಮ್ಮಲ್ಲಿ ಋಣಾತ್ಮಕ ಕಂಪನಗಳು (Negative vibrations) ಬೆಳೆಯುತ್ತವೆ. ಧನಾತ್ಮಕ ಕಂಪನಗಳಿಂದ ಆರೋಗ್ಯ ದೊರೆತರೆ ಋಣಾತ್ಮಕ ಕಂಪನಗಳಿಂದ ಅನಾರೋಗ್ಯ ದೊರೆಯುತ್ತದೆ.

ಒಮ್ಮೆ ಈ ಶಕ್ತಿಯ ಜ್ಞಾನ ಅರಿವಾಯಿತೆಂದರೆ, ಅದನ್ನು ನಾವು ಯಾವುದಕ್ಕೂ ಉಪಯೋಗಿಸಬಹುದು. ಒಳ್ಳೆಯದಕ್ಕೆ ಉಪಯೋಗಿಸಿದರೆ ನಮಗೂ ಒಳಿತು. ಕೆಟ್ಟದ್ದಕ್ಕೆ ಉಪಯೋಗಿಸಿದರೆ, ಮೊದಲು ಲಾಭವೆಂದು ಅನಿಸಿದರೂ, ನಂತರ ಅದು ಕೆಡುಕೇ. ಉದಾಹರಣೆಗೆ – ನಿಜಭಕ್ತಿಯಿಂದ ದೈವವನ್ನು ಪೂಜಿಸುವ ಅರ್ಚಕರು ಆರೋಗ್ಯವಂತರಾಗಿ ಹಾಗೂ ದೀರ್ಘಾಯುಷಿಗಳಾಗಿ ಬಾಳುತ್ತಾರೆ. ಅದೇ ರೀತಿ ಕ್ಷುದ್ರದೈವವನ್ನು ಪೂಜಿಸಿ ಮಾಟ ಮಾಡುವ ಮಾಂತ್ರಿಕನು ಕೆಟ್ಟ ಸಾವನ್ನಪ್ಪುತ್ತಾನೆ. ಮಾಂತ್ರಿಕರು ಎಂದಾದರೂ ನೆಮ್ಮದಿಯ ಬಾಳು ಬಾಳಿದ್ದನ್ನು ನೋಡಿದ್ದೀರಾ? ಹೀಗೆ ಈ ಶಕ್ತಿಯ ಉಪಯೋಗದ ಸ್ವಾತಂತ್ರ್ಯ ಹಾಗೂ ಪರಿಣಾಮದ ಹಕ್ಕುದಾರಿಕೆಯೂ ಸಂಪೂರ್ಣವಾಗಿ ನಿಮ್ಮದೇ. ಯಾಕೆಂದರೆ, ನಿಮ್ಮ ಮನಸ್ಸಿನ ಉದ್ದೇಶವೇ ವಸ್ತುಭೂತವಾಗಿ ಪರಿಣಮಿಸಿರುತ್ತದೆ. (Your mind's energy gets materialised into a physical form). ಅದು ಹೇಗೆ ಎಂದು ಈಗ ತಿಳಿಯೋಣ.

**ಚೈತನ್ಯದಿಂದ ವಸ್ತುವಿನ ಜನ್ಮ :** ಐನ್‌ಸ್ಟೀನನ ಪ್ರಸಿದ್ಧ ನಿಯಮ – [$E = mc^2$] ಏನು ಹೇಳುತ್ತದೆಂದರೆ ಚೈತನ್ಯವು ವಸ್ತುವಾಗಿ ಹಾಗೂ ವಸ್ತುವು ಚೈತನ್ಯವಾಗಿ ಮಾರ್ಪಡುತ್ತದೆ ಎಂದು. ಕಣ್ಣಿಗೆ ಕಾಣಿಸದಿರುವ ಈ ಚೈತನ್ಯವು ವಿವಿಧ ರೂಪಗಳಲ್ಲಿ ಈ ವಿಶ್ವವನ್ನು ತುಂಬಿದೆ. ವಿವಿಧ ರೀತಿಯ ಚೈತನ್ಯಗಳ ಜಾಲವೇ ಈ ವಿಶ್ವ (The whole universe is a network of different energies). ಚೈತನ್ಯ ಹಾಗೂ ವಸ್ತುಗಳ ನಡುವೆ ಇರುವುದು ಕಂಪನಗಳು (Energy gets transformed into mass, and vice versa, through vibrations). ಇದಕ್ಕೆ ಒಂದು ಚಿಕ್ಕ ಉದಾಹರಣೆಯೆಂದರೆ – ಎರಡು ಡೋಲುಗಳನ್ನು ಒಂದಕ್ಕೊಂದು ತಾಕದಂತೆ ಅಕ್ಕ ಪಕ್ಕ ಇಟ್ಟು, ಒಂದು ಕೋಲಿನ ಮೇಲೆ ಒಂದು ನಾಣ್ಯವನ್ನಿಟ್ಟು ಇನ್ನೊಂದು ಡೋಲನ್ನು ಬಡಿಯಿರಿ. ಈ ಬಡಿತದಿಂದ ಹುಟ್ಟುವ ಕಂಪನಗಳು ಪಕ್ಕದ ಡೋಲಿನ ಮೇಲಿರುವ ನಾಣ್ಯವನ್ನು ಅದುರಿಸುತ್ತವೆ. ಅಂದರೆ ಡೋಲು ಬಡಿತದ ಶಕ್ತಿಯು ಕಂಪನಗಳನ್ನು ಹುಟ್ಟಿಸಿ, ಆ ಕಂಪನಗಳು ನಾಣ್ಯವನ್ನು ಅದುರಿಸುವ ಚೈತನ್ಯವನ್ನೂ ಹುಟ್ಟಿಸುತ್ತವೆ.

ನಮ್ಮ ಜೀವಾತ್ಮದಲ್ಲಿ ಅಡಗಿರುವ ಪರಮಾತ್ಮವು ಕೂಡ ಅಪರಿಮಿತ ಚೈತನ್ಯವನ್ನು ಹೊಂದಿದೆ. ನಮ್ಮ ಉದ್ದೇಶ ಮಾತ್ರದಿಂದ ಘಟನೆಗಳನ್ನು ಸೃಷ್ಟಿಸುವ ಶಕ್ತಿಯು ನಮ್ಮೆಲ್ಲರಲ್ಲೂ ಇದೆ. ಅದನ್ನು ನಮ್ಮ ಹಿರಿಯರು **"ಕುಂಡಲಿನೀ ಶಕ್ತಿ"** ಎಂದು ಕರೆದಿದ್ದಾರೆ. ಈ ಹಿಂದೆ ತಿಳಿಸಿರುವ ವಿಧಾನಗಳಿಂದ ಅಥವಾ ನಿಜಭಕ್ತಿಯ ಪೂಜೆ, ಪ್ರಾರ್ಥನೆಗಳಿಂದ ನಮ್ಮೊಳಗಿನ ಚೈತನ್ಯವನ್ನು ನಾವು ತಿಳಿಯಬಹುದು.

**<u>ಪ್ರಾರ್ಥನೆ, ಪೂಜೆಗಳ ಅಗತ್ಯ :</u>** ಮನುಷ್ಯನಿಗೂ ಪ್ರಾಣಿಗಳಿಗೂ ಇರುವ ಇನ್ನೊಂದು ವ್ಯತ್ಯಾಸವೆಂದರೆ "ನಾನು, ನನ್ನದು, ನನಗೆ" ಎಂಬ ಅಹಮಿಕೆ. ಈ "ಅಹಂ" (ego) ನಿಂದಾಗಿ ಸಂಪೂರ್ಣ ಜ್ಞಾನಾರ್ಜನೆಯು ನಮ್ಮಿಂದ ಸಾಧ್ಯವಾಗುವುದಿಲ್ಲ. ಇದನ್ನರಿತಿದ್ದ ಪೂರ್ವಿಕರು ನಮ್ಮಲ್ಲಿನ "ಅಹಂ"ಕಾರವನ್ನು ತ್ಯಜಿಸಲೆಂದೇ ಪ್ರಾರ್ಥನೆ, ಪೂಜೆಗಳನ್ನು ರೂಪಿಸಿದರು. ತನ್ನದೆಂಬುದೇನು ಇಲ್ಲಿಲ್ಲ, ಎಲ್ಲವೂ ಆ ಸರ್ವಶಕ್ತ ಚೈತನ್ಯದ್ದು ಎಂಬುದನ್ನು ಅರಿತಾಗ ಮಾತ್ರ ನಮ್ಮಲ್ಲಿನ ಅಹಂಕಾರ ತೊಲಗುತ್ತದೆ ಎಂಬುದನ್ನು ಅವರು ಅನುಭವಗಳಿಂದ ತಿಳಿದಿದ್ದರು. ತಮ್ಮ ಅನುಭವಗಳು ಇತರರೆಲ್ಲರಿಗೂ ಮಾರ್ಗದರ್ಶಿಯಾಗಲಿ ಎಂಬುದಕ್ಕೋಸ್ಕರ ಅನೇಕ ತರಹದ ಪ್ರಾರ್ಥನೆ ಹಾಗೂ ಪೂಜೆಯ ಕ್ರಮಗಳನ್ನು ಅವರು ಸಿದ್ಧಪಡಿಸಿದರು.

ದೇವಾಲಯದಲ್ಲಿರುವ ಪೂಜಾಕ್ರಮಗಳು ಎಷ್ಟರ ಮಟ್ಟಿಗೆ ವೈಜ್ಞಾನಿಕ ಎಂದು ಈಗ ತಿಳಿಯೋಣ. ಊದುಬತ್ತಿಯ ಸುವಾಸನೆಯಿಂದ ಮನಸ್ಸು ಪ್ರಫುಲ್ಲಿತವಾಗುತ್ತದೆ ಎಂಬುದೂ ಎಲ್ಲರಿಗೂ ತಿಳಿದಿರುವುದೇ. ದೀಪದ ಬೆಂಕಿಯಿಂದ ಅಲ್ಲಿರುವ ಸೂಕ್ಷ್ಮಕ್ರಿಮಿಗಳು ನಾಶವಾಗುತ್ತವೆ. ನಂತರ, ಅದರ ಜೊತೆಗೆ ಘಂಟೆ, ಜಾಗಟೆ, ಶಂಖಗಳ ಶಬ್ದದಿಂದ ಅಲ್ಲಿನ ವಾತಾವರಣದಲ್ಲಿ ಧನಾತ್ಮಕ ಕಂಪನಗಳು (Positive Vibrations) ಹುಟ್ಟುತ್ತವೆ. ಭಕ್ತರು ಬಂದು ಪ್ರಾರ್ಥಿಸುವ ಉದ್ದೇಶದಿಂದಾಗಿ ದೈವದ ಮೂರ್ತಿಯಲ್ಲಿ ಚೈತನ್ಯದ ಉತ್ಪತ್ತಿಯಾಗಿರುತ್ತದೆ. ಆ ಮೂರ್ತಿಯ ಅಭಿಷೇಕದ ನೀರಿನಲ್ಲೂ ಚೈತನ್ಯದ ಅಂಶವಿರುವುದರಿಂದ ಆ ನೀರು ತೀರ್ಥವಾಗಿ ಪವಿತ್ರವಾಗುತ್ತದೆ. ಸೇವಿಸುವವರಿಗೆ ಒಳಿತಾಗಲಿ ಎಂದು ಸದುದ್ದೇಶದಿಂದ ಅರ್ಪಿಸಿದ ನೈವೇದ್ಯವು ಪ್ರಸಾದವಾಗಿ ಪವಿತ್ರವಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, ನಿರ್ಮಲ ಹಾಗೂ ಪ್ರಶಾಂತ ವಾತಾವರಣವಿರುವ ದೇವಾಲಯದಲ್ಲಿ ಕುಳಿತಾಗ ನಿಮಗೆ ಸಿಗುವಂತಹ ಆನಂದ ಹಾಗೂ ಮನಶ್ಶಾಂತಿ ಬೇರೆ ಎಲ್ಲಿಯೂ ಸಿಗುವುದಿಲ್ಲ.

ಈ ಮೊದಲೇ ಹೇಳಿದಂತೆ, ಪ್ರಾರ್ಥನೆಯು ನಮ್ಮಲ್ಲಿರುವ "ಅಹಂ" ಅನ್ನು ತೊಲಗಿಸುವ ಪ್ರಯತ್ನ. ಈ "ಅಹಂ" ನಮ್ಮಲ್ಲಿ ಹೇಗೆ ಹುಟ್ಟುತ್ತದೆಂದು ಈಗ ತಿಳಿಯೋಣ. ಚಿಕ್ಕ ಮಕ್ಕಳಿರುವಾಗ ನಮ್ಮಲ್ಲಿ ಸಾಧಾರಣವಾಗಿ ಈ "ಅಹಂ" ಇರುವುದಿಲ್ಲ. ದೊಡ್ಡವರಾಗಿ ಬೆಳೆಯುತ್ತಾ ಹೋದಂತೆ ಪ್ರಾಪಂಚಿಕ ವಸ್ತುಗಳ ಮೇಲೆ ನಮ್ಮ ವ್ಯಾಮೋಹ ಬೆಳೆಯುತ್ತಾ ಹೋಗುತ್ತದೆ ಹಾಗೂ 'ನಾನು, ನನ್ನದು' ಎಂಬ ಭಾವನೆ ಬಲವಾಗುತ್ತದೆ. ಒಂದು ವಸ್ತುವಿನ ಮೇಲೆ ಅತಿಯಾಗಿ ಆಸೆಪಡುವುದು "ಕಾಮ". ಆ ವಸ್ತು ನಮಗೆ ಸಿಕ್ಕಿದಾಗ ಅದನ್ನು ನಮ್ಮಲ್ಲೇ ಇರಿಸಿಕೊಳ್ಳುವುದು "ಲೋಭ". ನಮ್ಮಲ್ಲೇ ಉಳಿದ ವಸ್ತುವಿನ ಮೇಲೆ ಬೆಳೆಯುವುದು "ಮೋಹ". ನನ್ನಲ್ಲಿ ಇದು ಇರುವುದರಿಂದಾಗಿ ನನ್ನ ಸಮಾನರು ಇಲ್ಲ ಎಂಬಂತೆ ಹುಟ್ಟುವುದು "ಮದ". ಕಾಮಕ್ಕೆ ಕಾರಣವಾದ ವಸ್ತು ನಮಗೆ ಸಿಗದೇ ಇದ್ದಾಗ ನಮಗೆ ಬರುವುದು "ಕ್ರೋಧ". ಆ ವಸ್ತು ಇನ್ನೊಬ್ಬರಿಗೆ ದೊರೆತಾಗ ನಮ್ಮಲ್ಲಿ ಬೆಳೆಯುವುದು "ಮಾತ್ಸರ್ಯ". ಈ ಎಲ್ಲಾ ಅರಿಷಡ್ವರ್ಗಗಳಿಗೆ ಮೂಲ ಕಾರಣ ಅತಿಯಾದ ಆಸೆ ಹಾಗೂ ಈ ಅತಿಯಾದ ಆಸೆಗೆ ಕಾರಣ ನಮ್ಮ ಅಹಮಿಕೆ.

ಅಹಮಿಕೆ ಎಂಬ ಒಂದು ಚಿಕ್ಕ ಕೀಟವು ಬೆಳೆದು ವಿಷಜಂತುವಾಗಿ ನಮ್ಮನ್ನು ಆಕ್ರಮಿಸುವುದು ಹೀಗೆ. ಇದನ್ನು ಮೊಳಕೆಯಲ್ಲಿಯೇ ಚಿವುಟುವ ಅಗತ್ಯವನ್ನು ಮನಗಂಡಿದ್ದ ನಮ್ಮ ಪೂರ್ವಜರು ದೈವಪೂಜೆಯ ಕ್ರಮಗಳನ್ನು ಸೃಷ್ಟಿಸಿದರು. ಊರಿಗೊಂದು ದೇವಾಲಯವಿರಬೇಕು ಹಾಗೂ ಮನೆಗೊಂದು ದೇವಕೋಣೆಯಿರಬೇಕು – ಎಂಬ ನಿಯಮವನ್ನು ರೂಪಿಸಿದರು. ನಮ್ಮ ದೇವರುಗಳ ರೂಪಗಳಲ್ಲಿ ಕೂಡ ಬಹಳಷ್ಟು ಅರ್ಥಗಳಿವೆ. ಬ್ರಹ್ಮನ ನಾಲ್ಕು ತಲೆಗಳು ನಾಲ್ಕು ವೇದಗಳ ಪ್ರತೀಕ. ವಿಷ್ಣುವಿನ ತಲೆಯ ಮೇಲಿರುವ ಆದಿಶೇಷನು ಆತನ ಕುಂಡಲಿನೀ ಶಕ್ತಿಯ ಪ್ರತೀಕ. ಶಿವನ ನೀಲಕಂಠವು ದುಃಖವನ್ನು ತಡೆಹಿಡಿದು ಆನಂದವನ್ನು ಹೊರಸೂಸುವ ಪ್ರತೀಕ. ನೀರನ್ನು ನಾವು ಗಂಗೆಯೆಂದು ಪೂಜಿಸುವುದು – ನೀರಿನ ಬಗೆಗೆ ನಮಗೆ

ಗೌರವಭಾವನೆ ಬೆಳೆದು ಅದನ್ನು ನಾವು ಕಲುಷಿತಗೊಳಿಸದಿರಲಿ ಎಂದು. ಸೂರ್ಯನನ್ನು ಆದಿತ್ಯನೆಂದು ಪೂಜಿಸುವುದು – ಸಕಲ ಜೀವಸೃಷ್ಟಿಗೆ ಸೂರ್ಯರಶ್ಮಿಯು ಕಾರಣವಾದ್ದರಿಂದ. ಗೋವನ್ನು ಕಾಮಧೇನುವಿನಂತೆ ಪೂಜಿಸುವುದು– ಅದರ ಹಾಲನ್ನು ಕುಡಿದು ಬೆಳೆಯುತ್ತಿರುವ ನಮ್ಮಲ್ಲಿ ಅದರ ಬಗೆಗೆ ಗೌರವಭಾವನೆ ಬೆಳೆಯಲಿ ಎಂದು. ಉದ್ದೇಶಗಳನ್ನು ಸರಿಯಾಗಿ ತಿಳಿದರೆ ಅದು ಅರ್ಥ, ಇಲ್ಲದಿದ್ದರೆ ಅದು ಅನರ್ಥ ಅಲ್ಲವೇ!

ವಿಶಿಷ್ಟವಾದ ಸಂಪ್ರದಾಯಗಳು ನಮ್ಮಲ್ಲಿ ಹೇರಳವಾಗಿವೆ. ಅಶ್ವತ್ಥ ವೃಕ್ಷಕ್ಕೆ ಪ್ರದಕ್ಷಿಣೆ, ವಿಭೂತಿ ಹಾಗೂ ಕುಂಕುಮ ಧಾರಣೆ, ರುದ್ರಾಕ್ಷಿ ಮಾಲೆಯ ಹಾಗೂ ತುಳಸೀಮಾಲೆಯ ಧಾರಣೆ, ತುಳಸೀ ಪ್ರದಕ್ಷಿಣೆ, ಸಾಷ್ಟಾಂಗನಮಸ್ಕಾರ ಇತ್ಯಾದಿ ಇತ್ಯಾದಿ. ಈ ಎಲ್ಲ ಸಂಪ್ರದಾಯಗಳಿಗೂ ಅವುಗಳದೇ ಆದ ವಿಶಿಷ್ಟ ಅರ್ಥಗಳಿವೆ. ಆಚರಿಸಿದಾಗ ಮಾತ್ರ ಫಲಪ್ರಾಪ್ತಿ. ಅರಿತು ಆಚರಿಸಿದರೆ ಇನ್ನೂ ಶ್ರೇಷ್ಠಫಲ.

**ಕೊನೆಯದಾಗಿ :** ದೈವತ್ವವು ತರ್ಕಕ್ಕೆ ನಿಲುಕುವಂಥದ್ದಲ್ಲ; ಅದು ಕೇವಲ ಅನುಭವವೇದ್ಯ. ನಮ್ಮ ಆತ್ಮಶಕ್ತಿಯನ್ನು ನಾವು ಅರಿಯುವುದು ದೈವತ್ವದ ಕಡೆಗಿನ ನಮ್ಮ ಮೊದಲ ಮೆಟ್ಟಿಲು.

ಇಷ್ಟು ವಿವರಣೆಯ ನಂತರವೂ **'ನಾಸ್ತಿಕರಾಗಿ ಉಳಿಯುತ್ತೇವೆ'** ಎನ್ನುವವರಿಗೆ ಒಂದು ಮಾತು – ವಿದ್ಯುತ್ ಎಂಬ ಶಕ್ತಿ ಇದೆ ಎಂದು ನೀವು ನಂಬಿದರೆ ಅದನ್ನು ನಿಮ್ಮ ಮನೆಗೆ ಉಪಯೋಗಿಸುತ್ತೀರಿ ಹಾಗೂ ನಿಮ್ಮ ಮನೆಯನ್ನು ಅದರ ಬೆಳಕಿನಿಂದ ಬೆಳಗುತ್ತೀರಿ. ವಿದ್ಯುಚ್ಛಕ್ತಿ ಇಲ್ಲ ಎಂದು ಹಟ ಹಿಡಿದರೆ ಎಣ್ಣೆಯ ದೀಪದಲ್ಲಿಯೇ ಬದುಕುತ್ತೀರಿ. ಅದೇ ತರಹ ದೈವವನ್ನು ನೀವು ನಂಬಿದರೆ ಜ್ಞಾನಿಯಾಗುತ್ತೀರಿ ಹಾಗೂ ನಿಮ್ಮ ಆತ್ಮಶಕ್ತಿಯನ್ನು ಅರಿತುಕೊಳ್ಳುತ್ತೀರಿ. ನಂಬದೇ ಇರುವ ಆಯ್ಕೆ ಕೂಡ ನಿಮ್ಮದೇ.

ದೈವದ ನಂಬಿಕೆಗಳ ಬಗೆಗಿನ ನನ್ನ ವಿಚಾರಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವುದಷ್ಟೇ ಇಲ್ಲಿ ನನ್ನ ಉದ್ದೇಶವೇ ಹೊರತು, ಯಾವ ಪಂಥ ಅಥವಾ ಪಂಗಡವನ್ನು ಸಮರ್ಥಿಸುವುದು ಅಥವಾ ದೂಷಿಸುವುದು ಸರ್ವಥಾ ಅಲ್ಲ. ಎಲ್ಲ ಧರ್ಮಗಳಿಗಿಂತಲೂ ಮನುಷ್ಯಧರ್ಮವು ಶ್ರೇಷ್ಠ ಎಂಬುದು ನನ್ನ ನಂಬಿಕೆ. ಈ ಲೇಖನದ ಸ್ಫೂರ್ತಿಯಿಂದಾಗಿ ಓದುಗರು ತಮ್ಮ ಅಂತಃಚಕ್ಷುವನ್ನು ತೆರೆದು ಆತ್ಮವನ್ನು ಸಾಕ್ಷಾತ್ಕರಿಸಿಕೊಂಡರೆ ಈ ಲೇಖನದ ಉದ್ದೇಶ ಸಾರ್ಥಕವಾದಂತೆ.

**ಸಮಸ್ತ ಜೀವಾಃ ಸುಖಿನೋಭವಂತು**

1.3.2000,
ಬೆಂಗಳೂರು.